## ೨೮.೧೦.೨೦೧೪ರಂದು ನಡೆದ ಪ್ರಶಾಸನ ಸಮಿತಿ ೨೩ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೨೩ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಅಕ್ಟೋಬರ್ ೨೮, ೨೦೧೪ರ ಮಂಗಳವಾರ ಅಪರಾಹ್ನ ೦೨:೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಶ್ರೀನಿವಾಸ ವರಖೇಡಿ,** ಮಾನ್ಯ ಕುಲಪತಿಗಳು(ಪ್ರಭಾರ) | ಅಧ್ಯಕ್ಷರು |
| ೨. | **ಪ್ರೊ. ಕೆ.ಈ. ರಾಧಾಕೃಷ್ಣ,** ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ,** ಬೆಂಗಳೂರು | ಸದಸ್ಯರು |
| ೪. | **ಶ್ರೀ ಅಶೋಕ ಡಿ ಬಾಗೋಜಿಕೊಪ್ಪ,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಶ್ರೀ ಡಿ.ಕೆ. ಶಿವಕುಮಾರ್, ಸಹನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರೊ. ಎಂ.ಕೆ ಶ್ರೀಧರ್,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಬೆಂಗಳೂರು | ಸದಸ್ಯರು |
| ೨. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೩. | **ಆಯುಕ್ತರು,** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರ |
| ೪. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೫. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು(ಪ್ರ) ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ದಿ.೧೩.೧೦.೨೦೧೪ರಂದು ನಡೆದ ೨೩ನೇ ಸಭೆಯಲ್ಲಿ ಚರ್ಚಿತವಾಗದ ವಿಷಯಗಳನ್ನು ದಿ.೨೮.೧೦.೨೦೧೪ರ ಮುಂದುವರೆದ ಸಭೆಯಲ್ಲಿ ಮಂಡಿಸಲಾಯಿತು. ಆ ವಿಷಯಗಳು ಹಾಗೂ ಅದರ ನಿರ್ಣಯಗಳು ಈ ಕೆಳಕಂಡಂತಿವೆ.

**ವಿಷಯ 01 :** **ದಿನಾಂಕ 02.09.2014ರಂದು ನಡೆದ ಕಸಂವಿಯ ಪ್ರಶಿಕ್ಷಣ ಪರಿಷತ್ತಿನ 13ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ದಿನಾಂಕ 02.09.2014ರಂದು ಕಸಂವಿಯ **ಪ್ರಶಿಕ್ಷಣ ಪರಿಷತ್ತಿನ 13ನೇ** ಸಭೆಯು ಮಾನ್ಯ ಕುಲಪತಿಗಳ (ಪ್ರಭಾರಿ) ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಅದರ ನಡಾವಳಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. **(ಅನುಬಂಧ – 4)**

ನಿರ್ಣಯ: ಕಸಂವಿಯ ಪ್ರಶಿಕ್ಷಣ ಪರಿಷತ್ತಿನ 13ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು ಹಾಗೂ ಈ ಕೆಳಕಂಡ ವಿಷಯಗಳಲ್ಲಿ ಸೂಚನೆಗಳನ್ನು ನೀಡಲಾಯಿತು.

ವಿಷಯ 11 :

ವಿಶ್ವವಿದ್ಯಾಲಯವು ಆಯೋಜಿಸಿರುವ ಸೆಮಿನಾರ್ ಅಥವಾ ಇನ್ನಿತರ ಕಾರ್ಯಕ್ರಮಗಳಲ್ಲಿ ಸಾಮಾನ್ಯ ಉಪನ್ಯಾಸಕ್ಕೆ 1,000/- ಹಾಗೂ ವಿಶೇಷ ಆಹ್ವಾನಿತ ಉಪನ್ಯಾಸಗಳಿಗೆ 2000/-ರೂಗಳ ಗೌರವ ಸಂಭಾವನೆ ನೀಡಬೇಕೆಂದು ಸದಸ್ಯರು ಅಭಿಪ್ರಾಯಪಟ್ಟು ಬದಲಾವಣೆಯನ್ನು ಅನುಮೋದಿಸಿದರು.

ವಿಷಯ 13 :

ವಿಶ್ವವಿದ್ಯಾಲಯದ ಶೈಕ್ಷಣಿಕ ಸಿಬ್ಬಂದಿಗಳಾದ ಯೋಜನಾ ಸಹಾಯಕರನ್ನು ವಿವಿಧ ನಿಕಾಯಗಳಿಗೆ ಯೋಜಿಸಬಹುದಾಗಿದೆ. ಇವರ ಶೈಕ್ಷಣಿಕ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ವಿಶ್ವವಿದ್ಯಾಲಯದ ವಿವಿಧ ನಿಕಾಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ಕಾರ್ಯವನ್ನು ನಿರ್ವಹಿಸಲು ಯೋಜನೆಯು ಸಹಾಯಕವಾಗುತ್ತದೆ. ಈಗಾಗಲೇ ನಿಯುಕ್ತರಾದ ಯೋಜನಾಸಹಾಯಕ ಸಿಬ್ಬಂದಿಯ ವಿದ್ಯಾರ್ಹತೆಗೆ ಅನುಗುಣವಾಗಿ ವಿವಿಧ ನಿಕಾಯಗಳಲ್ಲಿ ನಿಯೋಜಿಸಿದ ಪಟ್ಟಿಯ ಬಗೆಗೆ ವಿವರವಾಗಿ ಚರ್ಚಿಸಿ ವಿದ್ವಾನ್ ಉದಯನ ಹೆಗಡೆ ಇವರನ್ನು ಭಾಷಾ ನಿಕಾಯದಲ್ಲಿ ಹಾಗೂ ವಿದ್ವಾನ್ ತಿಮ್ಮಣ್ಣ ಆರ್. ಇವರನ್ನು ಶಾಸ್ತ್ರ ನಿಕಾಯದಲ್ಲಿ ಸೇರಿಸುವಂತೆ ಸೂಚಿಸಲಾಯಿತು. ಯೋಜನಾ ಸಹಾಯಕರನ್ನು ಆಯಾ ನಿಕಾಯಗಳ ಡೀನ್‌ರ ನಿರ್ದೇಶಾನುಸಾರವಾಗಿ ಸಂಶೋಧನಾ ಕಾರ್ಯಗಳಲ್ಲಿ ಮತ್ತಿತರ ಕಾರ್ಯಗಳಲ್ಲಿ ತೊಡಗಿಸುವಂತೆ ನಿರ್ಣಯಿಸಲಾಯಿತು. ಅದರಂತೆ ಈ ಕೆಳಕಂಡಂತೆ ಪಟ್ಟಿಯನ್ನು ಅನುಮೋದಿಸಲಾಯಿತು.

| | |
|---|---|
| ಭಾಷಾನಿಕಾಯ : | ವಿದ್ವಾನ್ ಉದಯನ ಹೆಗಡೆ |
| | ವಿದ್ವಾನ್ ನಾರಾಯಣಸ್ವಾಮಿ ಎಂ.ಎಸ್ |
| | ವಿದುಷೀ ಸಾವಿತ್ರೀ ಪೂಜಾರಿ |
| | ವಿದ್ವಾನ್ ರಾಜಶೇಖರ ಕೆ.ಕೆ. |
| ಶಾಸ್ತ್ರನಿಕಾಯ : | ವಿದ್ವಾನ್ ತಿಮ್ಮಣ್ಣ ಆರ್ |
| | ವಿದ್ವಾನ್ ರಾಘವ ಕೆ.ಎಲ್. |
| | ವಿದುಷೀ ಜ್ಯೋತಿ ಹೆಚ್.ಪಿ |
| ವೇದಾಂತನಿಕಾಯ: | ವಿದುಷೀ ಶ್ರುತಿ ಎಚ್.ಕೆ |
| | ವಿದುಷೀ ಶಕುಂತಲಾ ಭಟ್ |
| | ವಿದುಷೀ ತೇಜಸ್ವಿನೀ ಡಿ. |

ಇದಕ್ಕೆ ಸಂಬಂಧಿಸಿದಂತೆ ಪ್ರಶಾಸನ ಸಭೆಯು ಯೋಜನಾ ಸಹಾಯಕ ಹುದ್ದೆಯಲ್ಲಿ ನಿಯುಕ್ತರಾದ ಸಿಬ್ಬಂದಿಗಳನ್ನು ಅವರ ವಿದ್ಯಾರ್ಹತೆ ಇತ್ಯಾದಿಗಳನ್ನು ಗಮನಿಸಿ ವಿವಿಧ ನಿಕಾಯಗಳಿಗೆ ಅವರ ಹುದ್ದೆಯೊಂದಿಗೆ ಯೋಜಿಸಿರುವ ಕ್ರಮವನ್ನು ಒಪ್ಪಿಕೊಂಡಿತು. ಅಲ್ಲದೇ ಈ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ, ಕರ್ತವ್ಯಗಳು, ಸೇವಾ ನಿಯಮಗಳು ಮತ್ತು ಪದೋನ್ನತಿ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಪರಿನಿಯಮವನ್ನು ರಚಿಸಲು ಈ ಸಭೆಯಲ್ಲಿ ನಿರ್ಣಯಿಸಲಾಯಿತು.

ವಿಷಯ 14:

2014-15ನೇ ಸಾಲಿನಿಂದ ಅನ್ವಯವಾಗುವಂತೆ ಡಿ.ಲಿಟ್-ವಿದ್ಯಾವಾಚಸ್ಪತಿ ಪದವಿಯ ಸಂಪೂರ್ಣ ರೂಪುರೇಷೆಯನ್ನು ಸಿದ್ಧಪಡಿಸಿ ಸಭೆಯ ಪರಿಶೀಲನೆಗಾಗಿ ಪ್ರಶಿಕ್ಷಣ ಪರಿಷತ್ತಿನಲ್ಲಿ ಸಲ್ಲಿಸಿ ಅನುಮತಿಯನ್ನು ಪಡೆಯಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಡಿ.ಲಿಟ್-ವಿದ್ಯಾವಾಚಸ್ಪತಿ ಪದವಿಯ ನಿಯಮಾವಳಿಗಳನ್ನು ಅನುಮೋದಿಸುವ ಮೊದಲು ಪ್ರಶಾಸನ ಸಭೆಯ ಸದಸ್ಯರಾದ ಡಾ. ವನಿತಾ ರಾಮಸ್ವಾಮಿಯವರನ್ನು ಇತ್ತೀಚಿಗಿನ ಯು.ಜಿ.ಸಿ ಮಾರ್ಗದರ್ಶನಗಳ ಚೌಕಟ್ಟಿನಲ್ಲಿ ಮತ್ತೊಮ್ಮೆ ಪರಿಶೀಲಿಸಲು ಸಭೆಯು ಸೂಚಿಸಿ ಅನುಮೋದಿಸಿತು. ಹಾಗೆಯೇ

ವಿಷಯ 16:

ದಿನಾಂಕ : 05.06.2014ರಂದು ನಡೆದ 12ನೇ ಪ್ರಶಿಕ್ಷಣ ಪರಿಷತ್ತಿನ ಸಭೆಯಲ್ಲಿ 28 ಸಂಸ್ಥೆಗಳಿಗೆ ಮಾನ್ಯತೆಯನ್ನು ನೀಡಿದ ಸಂಬಂಧ ಅನುಮೋದನೆಯನ್ನು ನೀಡಲಾಗಿತ್ತು. ಬಾಕಿ ಉಳಿದ 14 ಜ್ಯೋತಿಷ್ಯ ಅಧ್ಯಯನ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡಲು ಸಂಯೋಜಕರ ಉಪಸ್ಥಿತಿಯಲ್ಲಿ ತ್ರಿಸದಸ್ಯರ ಸಮಿತಿಯು ಭೇಟಿ ನೀಡಿ, ಪರಿಶೀಲಿಸಿ ಧನಾತ್ಮಕ

**ವರದಿಯು ನೀಡಿದ ನಂತರ ಮಾನ್ಯತೆಯನ್ನು ನೀಡಲಾಗಿ ಪ್ರಶಿಕ್ಷಣ ಪರಿಷತ್ತಿನಲ್ಲಿ ಸಲ್ಲಿಸಿ ಘಟನೋತ್ತರ ಅನುಮೋದನೆಯನ್ನು ನೀಡಲಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಸಿದ್ಧಾಂತ ಜ್ಯೋತಿಷ್ಯ ಮತ್ತು ಗಣಿತ ಜ್ಯೋತಿಷ್ಯಕ್ಕೆ ಸಂಬಂಧಿಸಿದ ಪಠ್ಯಾಂಶಗಳನ್ನು ಹೆಚ್ಚು ಸೇರಿಸಿ ಕೋರ್ಸ್ ಉಪಯುಕ್ತವಾಗುವಂತೆ ಮಾಡಲು ಸಭೆಯು ಸೂಚಿಸಿ ಅನುಮೋದಿಸಿತು.**

**ವಿಷಯ 02 : ದಿನಾಂಕ 01.09.2014ರಂದು ನಡೆದ ಕಸಂವಿಯ ಹಣಕಾಸು ಸಮಿತಿ 15ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ದಿನಾಂಕ 01.09.2014ರಂದು ಕಸಂವಿಯ **ಹಣಕಾಸು ಸಮಿತಿ** 15ನೇ ಸಭೆಯು ಮಾನ್ಯ ಕುಲಪತಿಗಳ (ಪ್ರಭಾರಿ) ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಅದರ ನಡಾವಳಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. **(ಅನುಬಂಧ – 5)**

ನಿರ್ಣಯ: **ಕಸಂವಿಯ ಹಣಕಾಸು ಸಮಿತಿ 15ನೇ ಸಭೆಯ ನಡಾವಳಿಯನ್ನು ಸರ್ವಾನುಮತದಿಂದ ಸಭೆಯು ಅನುಮೋದಿಸಿತು ಹಾಗೂ ಸರ್ಕಾರಿ ಲೆಕ್ಕ ಪರಿಶೋಧಕರು ಕಸಂವಿಯ 2011–12ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನೆಯನ್ನು ಮಾಡಿ ವರದಿಯನ್ನು ಸಲ್ಲಿಸಿದ್ದು, ಅವುಗಳಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಿಸಿ ಭವಿಷ್ಯದಲ್ಲಿ ಸರಿಪಡಿಸಿಕೊಳ್ಳಲು ಸೂಚಿಸಿದ್ದಾರೆ. ಇದನ್ನು ಪ್ರಶಾಸನ ಸಭೆಯಲ್ಲಿಟ್ಟು ಅನುಮೋದಿಸಿ ಶೀಘ್ರವೇ ಮುದ್ರಣಮಾಡಿ ಸರ್ಕಾರಕ್ಕೆ ಕಳುಹಿಸಿಕೊಡಲು ಸಭೆಯು ಸೂಚಿಸಿತು.**

**ವಿಷಯ 03 : ದಿನಾಂಕ 18.09.2014ರಂದು ನಡೆದ ಕಸಂವಿಯ ಖರೀದಿ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ: ದಿನಾಂಕ 18.09.2014 ಸೋಮವಾರದಂದು ಕಸಂವಿಯ ಖರೀದಿ ಸಮಿತಿ ಸಭೆಯು ಮಾನ್ಯ ಕುಲಪತಿಗಳ (ಪ್ರಭಾರಿ) ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11.00ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಅದರ ನಡಾವಳಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. **(ಅನುಬಂಧ – 6)**

ನಿರ್ಣಯ: **ಕಸಂವಿಯ ಖರೀದಿ ಸಮಿತಿ ಸಭೆಯ ನಡಾವಳಿಯನ್ನು ಸರ್ವಾನುಮತದಿಂದ ಸಭೆಯು ಅನುಮೋದಿಸಿತು.**

**ವಿಷಯ 04 : ದಿನಾಂಕ 12.08.2014ರಂದು ನಡೆದ ಕಸಂವಿಯ ಪ್ರಸಾರಾಂಗದ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ : ದಿನಾಂಕ 12.08.2014ರಂದು ಕಸಂವಿಯ **ಪ್ರಸಾರಾಂಗದ** ಸಭೆಯು ಮಾನ್ಯ ಕುಲಪತಿಗಳ (ಪ್ರಭಾರಿ) ಅಧ್ಯಕ್ಷತೆಯಲ್ಲಿ ನಡೆಯಿತು. ಅದರ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. **(ಅನುಬಂಧ – 7)**

ನಿರ್ಣಯ: **ಕಸಂವಿಯ ಪ್ರಸಾರಾಂಗದ ಸಭೆಯ ನಡಾವಳಿಯನ್ನು ಸರ್ವಾನುಮತದಿಂದ ಸಭೆಯು ಅನುಮೋದಿಸಿತು.**

**ವಿಷಯ 05: ಶ್ರೀ ರವೀಂದ್ರ ಕೆ., ವಕೀಲರು, ನಂದಿನಿ ಲೇಔಟ್, ಬೆಂಗಳೂರು ಇವರನ್ನು ಕಸಂವಿಯ ಅಡ್ವೊಕೇಟ್ ಪ್ಯಾನಲ್‌ಗೆ ನೇಮಿಸುವ ಬಗೆಗೆ**

**ಟಿಪ್ಪಣಿ:** ಶ್ರೀ ರವೀಂದ್ರ ಕೆ., ವಕೀಲರು, #78/43, 1ನೇ ಮಹಡಿ, 8ನೇ ಮುಖ್ಯ ರಸ್ತೆ, 4ನೇಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು ಇವರು ಉಚ್ಚ ನ್ಯಾಯಾಲಯ ಹಾಗೂ ಅಧೀನ ನ್ಯಾಯಾಲಯಗಳಲ್ಲಿ ಆಡಳಿತಾತ್ಮಕ, ಕಂದಾಯ, ಶಿಕ್ಷಣ, ಅರಣ್ಯ, ಭೂಸ್ವಾಧೀನ ಇತ್ಯಾದಿ ಪ್ರಕರಣಗಳಲ್ಲಿ ನ್ಯಾಯಿಕ ಸೇವೆಯನ್ನು ನೀಡುತ್ತಿದ್ದಾರೆ. ಇವರು ಕಸಂವಿಯ ಅಡ್ವೊಕೇಟ್ ಪ್ಯಾನಲ್‌ಗೆ ತಮ್ಮ ಹೆಸರನ್ನು ನೇಮಿಸಲು ವಿನಂತಿಸಿ, ವೈಯಕ್ತಿಕ ಪರಿಚಯ ಪತ್ರವನ್ನು ಕಸಂವಿಗೆ ನೀಡಿದ್ದಾರೆ. ಈ ಸಂಬಂಧ ಸಭೆಯ ಅನುಮತಿಯನ್ನು ಕೋರಿದೆ. **(ಅನುಬಂಧ – 8)**

ನಿರ್ಣಯ: **ಸದ್ಯದಲ್ಲಿ ಕಸಂವಿಯು ನೇಮಿಸಿರುವ ಇಬ್ಬರು ನ್ಯಾಯವಾದಿಗಳು ಕಾರ್ಯವನ್ನು ನಿರ್ವಹಿಸುತ್ತಿದ್ದು, ಅವರಿಗೆ ಮಾಸಿಕ ಗೌರವಧನವನ್ನು ನೀಡಲಾಗುತ್ತಿದೆ. ಈ ವಿಷಯದಲ್ಲಿ ನಿರ್ಣಯ ಸ್ವೀಕರಿಸುವ ಮುನ್ನ ಕಸಂವಿ ವಿರುದ್ಧ ಹಾಕಿರುವ ಮೊಕದ್ದಮೆಗಳ ಪಟ್ಟಿ, ಪ್ರಗತಿ ಮುಂತಾದ ವಿವರಗಳನ್ನು ಮುಂದಿನ ಪ್ರಶಾಸನ ಸಭೆಯಲ್ಲಿ ಮಂಡಿಸಲು ಸಭೆಯು ಸೂಚಿಸಿತು.**

**ವಿಷಯ 06: ಒಡನಾಡಿ ಸಂಸ್ಥೆಯಂತಹ ಸೇವಾಸಂಸ್ಥೆಗಳ ಅಭ್ಯರ್ಥಿಗಳಿಗೆ ಕಸಂವಿಯಲ್ಲಿ ಅಧ್ಯಯನ ಮಾಡಲು ವಿಶೇಷ ಮೀಸಲಾತಿ ನೀಡುವ ಬಗೆಗೆ**

**ಟಿಪ್ಪಣಿ:** ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಒಡನಾಡಿ ಸಂಸ್ಥೆಯ ಕುಲಪತಿಗಳ, ಕುಲಸಚಿವರುಗಳ ಹಾಗೂ ಸಮಾಜ ಚಿಂತಕರುಗಳ ಕುರಿತು ರಾಜ್ಯಮಟ್ಟದ ಕಾರ್ಯಾಗಾರವನ್ನು ದಿನಾಂಕ 31.05.2014ರಂದು ಮೈಸೂರಿನಲ್ಲಿ ಏರ್ಪಡಿಸಿತ್ತು. ಎಲ್ಲಾ ವಿಶ್ವವಿದ್ಯಾಲಯದ ಕುಲಪತಿಗಳ, ಕುಲಸಚಿವರುಗಳ ಹಾಗೂ ಸಮಾಜ ಚಿಂತಕರುಗಳನ್ನು ಕುರಿತು ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸವನ್ನು ಮಾಡಲು ತಮ್ಮ ಸಂಸ್ಥೆಯಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಮೀಸಲಾತಿ ನೀಡಬೇಕೆಂದು ಕೋರಿ ಅದಕ್ಕೆ ಸಂಬಂಧಿಸಿದ ಪತ್ರಿಕಾವರದಿಗಳನ್ನು ನೀಡಿರುವರು. ಈ ಸಂಬಂಧ ಸಭೆಯ ಅನುಮತಿಯನ್ನು ಕೋರಿದೆ. **(ಅನುಬಂಧ – 9)**

ನಿರ್ಣಯ: **ಮಾನವ ಸಾಗಾಣಿಕೆ ಹಾಗೂ ಶೋಷಣೆಗೊಳಗಾದ ಮಕ್ಕಳು/ವಿದ್ಯಾರ್ಥಿಗಳು ಕಸಂವಿಗೆ ಸಂಬಂಧಿಸಿದ ಪದವಿ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ಪ್ರವೇಶ ಅರ್ಜಿ ಸಲ್ಲಿಸಿ ಆಯ್ಕೆಯಾಗುವ ಸಂದರ್ಭದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಬಹುದೆಂದು ಸಭೆಯು ತೀರ್ಮಾನಿಸಿತು.**

**ವಿಷಯ 07:** **ವಿಶ್ವವಿದ್ಯಾಲಯದ ಅಧೀನವಾದ ಬೆಂಗಳೂರು ಮತ್ತು ಮೈಸೂರು ಘಟಕ ಕಾಲೇಜುಗಳಲ್ಲಿ ಸೇವಾನಿರತರಾದ ಅಧ್ಯಾಪಕ ಸಿಬ್ಬಂದಿಯ ಸೇವಾ ವಿಲೀನೀಕರಣ ಪ್ರಕ್ರಿಯೆಯ ಬಗೆಗೆ ಹಾಗೂ ಘಟಕ ಕಾಲೇಜುಗಳ ಪರಿನಿಯಮದ ತಿದ್ದುಪಡಿಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗೆಗೆ ಮತ್ತು ಸಂಧಾನಾಧಿಕಾರಿಗಳ ನಿಯೋಜನೆಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆಯ ನಂತರ ಸರ್ಕಾರದ ಅಧೀನವಾಗಿದ್ದ ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಮತ್ತು ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜುಗಳನ್ನು ಅವುಗಳ ಸ್ಥಿರ–ಚರ ಆಸ್ತಿಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಿ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳೆಂದು ಘೋಷಿಸಿ ಆದೇಶ ಹೊರಡಿಸಲಾಯಿತು. ಆ ತರುವಾಯ ವಿಶ್ವವಿದ್ಯಾಲಯ ಅಲ್ಲಿನ ಸ್ಥಿರ–ಚರ ಆಸ್ತಿಗಳನ್ನು ನಿಯಮಾನುಸಾರ ಪರಿಶೀಲಿಸಿ ಹಸ್ತಾಂತರಗೊಳಿಸಿಕೊಂಡು ಆಯಾ ಘಟಕ ಕಾಲೇಜುಗಳ ಪ್ರಾಚಾರ್ಯರ ಅಧೀನದಲ್ಲಿ ಕಾಲೇಜುಗಳನ್ನು ನಡೆಸಿಕೊಂಡು ಬರುತ್ತಿದೆ. ಆ ಕಾಲೇಜುಗಳ ನಿರ್ವಹಣಾವೆಚ್ಚವನ್ನು ಭರಿಸುವುದರೊಂದಿಗೆ ಅಗತ್ಯವಿರುವ ವಿಭಾಗಗಳಿಗೆ ಅತಿಥಿ ಉಪನ್ಯಾಸಕರನ್ನು ನಿಯೋಜಿಸುವ ಮೂಲಕ ಕಾಲೇಜುಗಳ ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ವಹಿಸುತ್ತಿದೆ, ಆದರೆ, ಈ ವರೆಗೆ ಆ ಕಾಲೇಜುಗಳಲ್ಲಿ ಸರಕಾರದಿಂದ ನಿಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯ ಸೇವಾವಿಲೀನೀಕರಣ ಪ್ರಕ್ರಿಯೆಯು ಪೂರ್ಣಗೊಂಡಿರುವುದಿಲ್ಲ. 2012ರಲ್ಲಿ ವಿಶ್ವವಿದ್ಯಾಲಯ ಈ ಸಂಬಂಧ ನಿಯಮಾನುಸಾರ ಕೆಲವು ಕ್ರಮಗಳನ್ನು ತೆಗೆದುಕೊಂಡು ಸೇವಾ ವಿಲೀನೀಕರಣ ಪರಿನಿಯಮವನ್ನು ರಚಿಸಿ ಪ್ರಶಾಸನ ಸಮಿತಿಯ ಅನುಮೋದನೆಯೊಂದಿಗೆ ಸರಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಿದೆ. ಈ ಪ್ರಸ್ತಾವನೆಯು ಕಳೆದ ಎರಡು ವರ್ಷಗಳಿಂದ ಸರ್ಕಾರದ ಉನ್ನತಶಿಕ್ಷಣ ಇಲಾಖೆಯ ಪರಿಶೀಲನೆಯಲ್ಲಿದೆ. ಈ ಎರಡು ಕಾಲೇಜಿನ ಅಧ್ಯಾಪಕರು ತಮ್ಮ ಮೂಲ ಸರಕಾರದ ಹುದ್ದೆಯಲ್ಲೇ ಮುಂದುವರೆದಿರುತ್ತಾರೆ. ಸರಕಾರದ ಶಿಕ್ಷಣ ಇಲಾಖೆಯ ಅನುದಾನದಿಂದ ವೇತನವನ್ನು ಪಡೆಯುತ್ತಿದ್ದಾರೆ. ಈ ಮಧ್ಯಂತರ ಕಾಲದಲ್ಲಿ ಅವರ ಸೇವಾ ಸೌಲಭ್ಯಗಳಾದ ಕಾಲಮಿತಿ ವೇತನಬಡ್ತಿ, ಸ್ವಯಂಚಾಲಿತ ವೇತನಬಡ್ತಿ, ಹೆಚ್ಚುವರಿ ವೇತನಬಡ್ತಿಗಳು ಹಾಗೂ ಸ್ಥಗಿತ ವೇತನಬಡ್ತಿ– ಈ ವಿಷಯಗಳಲ್ಲಿ ಆದೇಶ ಹೊರಡಿಸಲು ಸೂಕ್ತ ಪ್ರಾಧಿಕಾರದ ವ್ಯವಸ್ಥೆಯಾಗಬೇಕಾಗಿದೆ. ಈ ಸಂಬಂಧ ಈ ಎಲ್ಲ ಪ್ರಸಕ್ತ ಸರಕಾರೀ ಹುದ್ದೆಯಲ್ಲಿ ಕಾರ್ಯ ಮಾಡುತ್ತಿರುವ ಸಿಬ್ಬಂದಿಯನ್ನು ಅವರ ಹುದ್ದೆಗಳ ಸಹಿತವಾಗಿ ವಿಶ್ವವಿದ್ಯಾಲಯದ ಆಯಾ ಘಟಕ ಕಾಲೇಜುಗಳಲ್ಲಿ ನಿಯೋಜನೆಯ (**Deputation**) ಮೇರೆಗೆ ವರ್ಗಾಯಿಸಿದಲ್ಲಿ ನಿಯಮಾನುಸಾರ ವಿಶ್ವವಿದ್ಯಾಲಯವು ಸಕ್ಷಮ ಪ್ರಾಧಿಕಾರವಾಗುತ್ತದೆ. ಆಗ ವಿಶ್ವವಿದ್ಯಾಲಯದ ಕುಲಸಚಿವರು ಈ ಸಂಬಂಧ ಸೂಕ್ತ ಆದೇಶಗಳನ್ನು ನೀಡುವಲ್ಲಿ ಅನುಕೂಲವಾಗುತ್ತದೆ. ಇದರಿಂದ ಕಾಲೇಜುಗಳ ಆಡಳಿತ ನಿರ್ವಹಣೆಯು ಸುಖಕರವಾಗುತ್ತದೆ.

ಹೀಗಾಗಿ ಸೇವಾ ವಿಲೀನೀಕರಣ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ಈ ಸಿಬ್ಬಂದಿಯನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಲ್ಲಿ ನಿಯೋಜನೆಯ ಮೇರೆಗೆ ವರ್ಗಾಯಿಸಿ ಆದೇಶ ಹೊರಡಿಸುವಂತೆ ಕೋರಿ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಪತ್ರ ಬರೆಯಬಹುದಾಗಿದ್ದು, ಈ ಬಗೆಗೆ ಸಭೆಯಲ್ಲಿ ಚರ್ಚೆಗಾಗಿ ಮಂಡಿಸಿದೆ.

ಈ ಸಂಬಂಧ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದಲೂ ಪತ್ರ ಬಂದಿದ್ದು, ಮುಂದಿನ ಕ್ರಮ ಕೈಗೊಳ್ಳಲು ಚರ್ಚೆಗಾಗಿ ಮಂಡಿಸಿದೆ.

ನಿರ್ಣಯ: **ವಿಲೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಘಟಕ ಕಾಲೇಜುಗಳ ಸಿಬ್ಬಂದಿಯನ್ನು ನಿಯೋಜನೆ ಮೇರೆಗೆ ವರ್ಗಾಯಿಸುವ ಹಿನ್ನೆಲೆಯಲ್ಲಿ ತುಮಕೂರು, ಮಂಗಳೂರು, ಕುವೆಂಪು ವಿಶ್ವವಿದ್ಯಾಲಯಗಳ ಆಶ್ರಯದಲ್ಲಿದ್ದ ಘಟಕ ಕಾಲೇಜುಗಳ ಸಿಬ್ಬಂದಿ ಯಾವ ಕ್ರಮದಲ್ಲಿ ವರ್ಗಾವಣೆ ಹೊಂದಿದರು ಎಂಬುದರ ಬಗ್ಗೆ ಮಾಹಿತಿ, ಆದೇಶಗಳನ್ನು ಶೀಘ್ರವೇ ಪಡೆಯಲು ಸಭೆಯು ಸೂಚಿಸಿತು. ನವೆಂಬರ್ ತಿಂಗಳಿನಲ್ಲಿ ಈ ಘಟಕ ಕಾಲೇಜುಗಳ ಸಿಬ್ಬಂದಿ ಪದವಿ ಮತ್ತು ಸ್ನಾತಕೋತ್ತರ ವೇತನ ಶ್ರೇಣಿಯನ್ನು ಪಟ್ಟಿಮಾಡಿ ಈ ಹಿಂದೆ ಅಂತಹ ಘಟಕ ಕಾಲೇಜುಗಳ ಸಿಬ್ಬಂದಿಗೆ ಯು.ಜಿ.ಸಿ ವೇತನ ಶ್ರೇಣಿಯನ್ನು ಜಾರಿಗೊಳಿಸಿದ್ದ ಪಕ್ಷದಲ್ಲಿ ಅವುಗಳನ್ನು ಕಾನೂನಾತ್ಮಕ ಹಾಗೂ ಆರ್ಥಿಕ ಹಿನ್ನೆಲೆಯಲ್ಲಿ ಪರಿಶೀಲಿಸಲು ಒಂದು ತಿಂಗಳ ಅವಧಿಯನ್ನು ಸಭೆಯು ನೀಡಿ ನಂತರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬಹುದೆಂದು ಸಭೆಯು ಸೂಚಿಸಿತು.**

**ವಿಷಯ 08: ಘಟಕ ಕಾಲೇಜುಗಳ ಪರಿನಿಯಮದ ತಿದ್ದುಪಡಿಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗೆಗೆ ಮತ್ತು ಸಂಧಾನಾಧಿಕಾರಿಗಳ ನಿಯೋಜನೆಯನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2 ಘಟಕ ಕಾಲೇಜುಗಳ ವಿಲೀನಪ್ರಕ್ರಿಯೆಗೆ ಸಂಬಂಧಿಸಿದಂತೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ದಿನಾಂಕ 21.09.2014ರಂದು ಪತ್ರಿಸಿದ್ದು, ಸದರಿ ಪರನಿಯಮದಲ್ಲಿರುವ ಕೆಲವು ಕೊರತೆಗಳನ್ನು ಪ್ರಸ್ತಾಪಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಇಬ್ಬರು ಪ್ರಾಧ್ಯಾಪಕರು– ವಿದ್ವಾನ್ ಮಂಜುನಾಥ ಭಟ್ಟ ವಿನಾಯಕ, ಪ್ರಾಧ್ಯಾಪಕರು, ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು, ಹಾಗೂ ವಿದ್ವಾನ್ ಚಕ್ರವರ್ತಿ ರಾಮಚಂದ್ರನ್, ಸಹಾಯಕ ಪ್ರಾಧ್ಯಾಪಕರು, ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು, ಇವರನ್ನು ಸಂಧಾನಾಧಿಕಾರಿಗಳನ್ನಾಗಿ ನೇಮಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಈ ಸಂಧಾನಾಧಿಕಾರಿಗಳು ಕುಲಸಚಿವರೊಂದಿಗೆ ಚರ್ಚಿಸಿ ಪರಿನಿಯಮದಲ್ಲಿ ಆಗಬೇಕಾದ ಬದಲಾವಣೆಗಳನ್ನು ಸೂಚಿಸಿ ಪರಿನಿಯಮವನ್ನು ಪುನಾರೂಪಿಸಿದ್ದಾರೆ. ಈ ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ವಿಷಯ 7ಕ್ಕೆ ಅನ್ವಯಿಸಿದಂತೆ ಎರಡು ಘಟಕ ಕಾಲೇಜುಗಳ ಪ್ರಾಚಾರ್ಯರ ಸಹಾಯದೊಂದಿಗೆ ಕುಲಸಚಿವರು ಪ್ರಸ್ತಾವವನ್ನು ಸಲ್ಲಿಸುವ ಹಿನ್ನೆಲೆಯಲ್ಲಿ ಸಂಧಾನಾಧಿಕಾರಿಗಳ ಅವಶ್ಯಕತೆ ಇಲ್ಲವೆಂದು ಸಭೆಯು ತೀರ್ಮಾನಿಸಿತು. ಸರಕಾರವು ಕೇಳಿರುವ ಮಾಹಿತಿಗೆ ಅನ್ವಯ ಘಟಕಕಾಲೇಜುಗಳ ಪರಿಷ್ಕೃತ ಪರಿನಿಯಮಗಳಿಗೆ ಒಪ್ಪಿಗೆ ನೀಡಿತು. ಸರಕಾರಕ್ಕೆ ಈ ಪರಿನಿಯಮಗಳನ್ನು ಕಳುಹಿಸುವ ಮೊದಲು ಪರಿನಿಯಮಗಳ ಸಮಿತಿಯ ಗಮನಕ್ಕೆ ತಂದು ಕಳುಹಿಸಲು ಸೂಚಿಸಿತು.**

**ವಿಷಯ 09: ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಿಗೆ ಪಿಎಚ್.ಡಿ ಹಾಗೂ ಎಂ.ಫಿಲ್ ಮುಂಗಡ ವೇತನ ಬಡ್ತಿ ನೀಡುವ ಬಗೆಗೆ**

ಟಿಪ್ಪಣಿ : ಸಹಾಯಕ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡ ಸಹಾಯಕ ಪ್ರಾಧ್ಯಾಪಕರುಗಳಿಗೆ ಐದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ ಕಸಂವಿಯ ಸಹಾಯಕ ಪ್ರಾಧ್ಯಾಪಕರುಗಳು ಮನವಿಯನ್ನು ಸಲ್ಲಿಸಿರುತ್ತಾರೆ. ಸರ್ಕಾರಿ ಆದೇಶ ಸಂಖ್ಯೆ ಇಡಿ/200/ಯುಎನ್ಇ/2003, ದಿನಾಂಕ: 19.09.2007 ಮತ್ತು ಸರ್ಕಾರಿ ಆದೇಶ ಸಂಖ್ಯೆ ಇಡಿ/37/ಯುಎನ್ಇ/2009, ದಿನಾಂಕ: 24.12.2009 ಆದೇಶದಲ್ಲಿ ದಿನಾಂಕ 24.12.2009ರ ನಂತರ ಪಿಹೆಚ್.ಡಿ/ಎಂಫಿಲ್ ಪದವಿ ಪಡೆದಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ಐದು/ಮೂರು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಲು ಅವಕಾಶವಿರುತ್ತದೆ. ಈ ಮಾಹಿತಿಯನ್ನು ಸರ್ಕಾರಿ ಆದೇಶದೊಂದಿಗೆ ಸಭೆಯ ಅನುಮತಿಗಾಗಿ ಮಂಡಿಸಿದೆ. **(ಅನುಬಂಧ – 10)**

ನಿರ್ಣಯ: **ರಾಜ್ಯ ಸರ್ಕಾರವು ಅಂಗೀಕರಿಸಿದ ವಿಶ್ವವಿದ್ಯಾಲಯ ಅನುಧಾನ ಆಯೋಗ ವೇತನ ಶ್ರೇಣಿಗೆ ಸಂಬಂಧಿಸಿದ ಎಲ್ಲ ಆದೇಶಗಳನ್ನು ಪರಿಶೀಲಿಸಿ ಎಂಫಿಲ್ ಮತ್ತು ಪಿಹೆಚ್.ಡಿ ಪಡೆದು ನೇಮಕಾತಿಗೊಂಡ ಸಹಾಯಕ ಅಧ್ಯಾಪಕರಿಗೆ ಹೆಚ್ಚುವರಿ ವೇತನ ಬಡ್ತಿಯನ್ನು ನೀಡಿ ನಿಯಮಾನುಸಾರ ಕ್ರಮವಹಿಸಲು ಸಭೆಯು ಒಪ್ಪಿತು.**

**ವಿಷಯ 10 :** **ಕಸಂವಿಯ ಲೆಕ್ಕಪರಿಶೋಧನೆ ವರದಿಯ ಬಗೆಗೆ**

ಟಿಪ್ಪಣಿ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಕಾಲಂ 57(3)ರ ಅನ್ವಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರಿಗೆ ಅಧಿಕಾರವಿರುತ್ತದೆ. ಅದರಂತೆ, 2011–12ನೇ ಸಾಲಿನ ಲೆಕ್ಕಪರಿಶೋಧನೆ ಕೈಗೊಂಡು ವರದಿಯನ್ನು ಸಿದ್ದಪಡಿಸಿ ಸಲ್ಲಿಸಲಾಗಿರುತ್ತದೆ. ಈ ವರದಿಗೆ ಅನುಪಾಲನಾ ವರದಿಯನ್ನು ತಯಾರಿಸಿ ಪ್ರಶಾಸನಾ ಸಮಿತಿ ಸಭೆಯ ಅನುಮೋದನೆಗೆ ವಿಷಯವನ್ನು ಮಂಡಿಸಿದೆ. **(ಅನುಬಂಧ –14)**

ನಿರ್ಣಯ: **2011–12ರ ಲೆಕ್ಕ ಪರಿಶೋಧನಾ ವರದಿಯನ್ನು ಪ್ರಕಟಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಅನುಮತಿ ನೀಡಿತು.**

**ವಿಷಯ 11 :** **ಕ.ಸಂ.ವಿಶ್ವವಿದ್ಯಾಲಯದ ವಿಚಾರಣಾ ಪ್ರಾಧಿಕಾರ ಸ್ಥಾಪಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರಾದ ಶ್ರೀ ಆರ್. ವಿ. ದೇಶಪಾಂಡೆ, ಇವರು ದಿನಾಂಕ 30.06.2014ರಂದು ಸಭೆ ನಡೆಸಿ, ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ ವಿಚಾರಣಾ ಪ್ರಾಧಿಕಾರವನ್ನು ಸ್ಥಾಪಿಸಿ, ಆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ದೂರು ಮುಂತಾದವುಗಳನ್ನು ಆ ಹಂತದಲ್ಲಿಯೇ ಪರಿಶೀಲಿಸಲು ನಿರ್ಣಯಿಸಿ ಸೂಚಿಸಿದ್ದರು. ನಿವೃತ್ತ ಜಿಲ್ಲಾ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಈ ವಿಚಾರಣಾ ಪ್ರಾಧಿಕಾರವನ್ನು ರಚಿಸಬೇಕಿದೆ. ಅವರ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಛೇರಿ ನಿರ್ವಹಣೆಗಾಗಿ ಒಬ್ಬ ಆಪ್ತಸಹಾಯಕರು, ಸಹಾಯಕ ಸಿಬ್ಬಂದಿಯನ್ನು ಪ್ರತ್ಯಾಯೋಜನೆಯ ಮೇಲೆ ನೇಮಿಸಬೇಕಾಗಿರುತ್ತದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಕಸಂವಿಯು ವಿಚಾರಣಾ ಪ್ರಾಧಿಕಾರವನ್ನು ಸ್ಥಾಪಿಸಲು ಸಭೆಯು ಅನುಮತಿ ನೀಡಿತು. ಆ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ, ನಿವೃತ್ತ ಜಿಲ್ಲಾ ನ್ಯಾಯಾಧೀಶರ ಸಂಭಾವ್ಯ ಪಟ್ಟಿಯನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಸೂಚಿಸಲು ಕಸಂವಿಯು ಪತ್ರ ಬರೆಯಬೇಕೆಂದು ಸಭೆಯು ಸೂಚಿಸಿತು.**

**ವಿಷಯ 12 :** **ಕಸಂವಿಯ ಸಿಬ್ಬಂದಿಗಳಿಗೆ ಎನ್. ಪಿ.ಎಸ್ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಅಳವಡಿಸುವ ಬಗೆಗೆ**

ಟಿಪ್ಪಣಿ : ಕಸಂವಿ ಸಿಬ್ಬಂದಿಗಳ ನೇಮಕಾತಿಗೊಂಡ ನಂತರದ ತಿಂಗಳಿನಿಂದ ಎನ್. ಪಿ.ಎಸ್ ಸೌಲಭ್ಯವು ಅನ್ವಯವಾಗುವಂತೆ ಮೂಲವೇತನ ಮತ್ತು ತುಟಿಭತ್ಯೆಗೆ 10% ಲೆಕ್ಕಹಾಕಿ 47ಜನ ಸಿಬ್ಬಂದಿಗಳ ಪಟ್ಟಿಯನ್ನು ತಯಾರಿಸಲಾಗಿದೆ. ಇದರ ಒಟ್ಟು ಬಾಬ್ತು ರೂ 19,02,262/–ಗಳಾಗಿದ್ದು ವಿಶ್ವವಿದ್ಯಾಲಯದ ದೇಣಿಗೆ ರೂ 19,02,262/–ಗಳನ್ನು ನೀಡಬೇಕಾಗಿರುತ್ತದೆ.

ವೈದ್ಯಕೀಯ ಸೌಲಭ್ಯಕ್ಕೆ ಸಂಬಂಧಿಸಿದಂತೆ ತುಮಕೂರು ವಿಶ್ವವಿದ್ಯಾಲಯವು ತಮ್ಮ ಸಿಬ್ಬಂದಿಗಳಿಗೆ ವಾರ್ಷಿಕ ಒಬ್ಬರಿಗೆ 1 (ಒಂದು) ಲಕ್ಷದ ಮಿತಿಯನ್ನು ಮೀಸಲಿಟ್ಟಿರುತ್ತಾರೆ. ಈ ಸೌಲಭ್ಯವನ್ನು ಸಹ ನಮ್ಮ ವಿವಿ ಸಿಬ್ಬಂದಿಗಳಿಗೆ ಅಳವಡಿಸಲು ಕೋರಿ ಮತ್ತು ಅದರ ಪಟ್ಟಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಕಸಂವಿ ಸಿಬ್ಬಂದಿಗಳಿಗೆ ಎನ್.ಪಿ.ಎಸ್ ಸೌಲಭ್ಯವನ್ನು ಸರ್ಕಾರದ ನಿಯಮಾನುಸಾರ ಜಾರಿಗೊಳಿಸಲು ಸಭೆಯು ಅನುಮೋದನೆ ನೀಡಿತು. ಇದಕ್ಕಾಗಿ ಪ್ರತ್ಯೇಕ ಖಾತೆಯನ್ನು ತೆಗೆದು ಅದರಲ್ಲಿ ಸಿಬ್ಬಂದಿಗಳ ಹಣವನ್ನು ಜಮಾಮಾಡಲು ಸೂಚಿಸಿತು. ನಂತರ ಎನ್.ಪಿ.ಎಸ್ ಸಂಸ್ಥೆಯ ಜೊತೆಗೆ ವ್ಯವಹರಿಸಿ ಅಲ್ಲಿ ಪ್ರತಿಯೊಬ್ಬ ನೌಕರನ ಹೆಸರಿನಲ್ಲಿ ಪ್ರತ್ಯೇಕ ಖಾತೆಯನ್ನು ತೆರೆದು ಮೊತ್ತವನ್ನು ಜಮಾ ಮಾಡಬೇಕೆಂದು ನಿರ್ಣಯಿಸಲಾಯಿತು.**

**ವೈದ್ಯಕೀಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ವೈದ್ಯಕೀಯ ನಿರ್ದೇಶನಾಲಯದಿಂದ ಮಾಹಿತಿ ಹಾಗೂ ಅದಕ್ಕೆ ಸಂಬಂಧಿಸಿದ ಪರಿನಿಯಮಗಳಿದ್ದರೆ, ಅದರ ಅನ್ವಯ ವೈದ್ಯಕೀಯ ಸೌಲಭ್ಯವನ್ನು ಜಾರಿಗೊಳಿಸಬಹುದೆಂದು ಸಭೆಯು ಸೂಚಿಸಿತು. ಅಲ್ಲಿಯವರೆಗೆ ಬೆಂಗಳೂರು ವಿಶ್ವವಿದ್ಯಾಲಯದಂತೆ ಪ್ರಕರಣಗಳನ್ನು ಪರಿಗಣಿಸಿ ಸಹಾಯ ನೀಡುವುದು.**

**ವಿಷಯ 13 :** **ರಾಮನಗರ ಜಿ॥, ಮಾಗಡಿ ತಾ॥, ತಿಪ್ಪಸಂದ್ರ ಗ್ರಾಮ, ಹೋಬಳಿಯಲ್ಲಿರುವ ಕಸಂವಿಯ ಜಮೀನಿನ ಸಮೀಪದಲ್ಲಿರುವ ಸ್ಥಳೀಯರಿಗೆ ಹೊರಗುತ್ತಿಗೆ ಆಧಾರದ ಮೇಲೆ ಕೆಲಸವನ್ನು ನೀಡುವ ಬಗೆಗೆ**

| | |
|---|---|
| ಟಿಪ್ಪಣಿ : | ರಾಮನಗರ ಜಿ॥, ಮಾಗಡಿ ತಾ॥, ತಿಪ್ಪಸಂದ್ರ ಗ್ರಾಮ, ಹೋಬಳಿಯಲ್ಲಿ 100 ಎಕರೆ ಜಮೀನನ್ನು ಸರ್ಕಾರವು ಕಸಂವಿಗೆ ನೀಡಿದ್ದು, ಈ ಸ್ಥಳದಲ್ಲಿ ಚೆಕ್ಕಬಂದಿ ಕೆಲಸವು ಆಗಬೇಕಾಗಿದೆ. ಸ್ಥಳೀಯರಿಗೆ 50% ಉದ್ಯೋಗ ಎಂಬ ಸರ್ಕಾರದ ಅಂಶದಡಿ ಕಸಂವಿಯಲ್ಲಿ ಉದ್ಯೋಗ ನೀಡಬೇಕಾಗುತ್ತದೆ.<br>ಈ ಹಿನ್ನೆಲೆಯಲ್ಲಿ ಕಸಂವಿಯ ತುರ್ತು ಅಗತ್ಯಕ್ಕೆ ತಕ್ಕಂತೆ ಆ ಭೂಮಿಯ ಮೇಲ್ವಿಚಾರಣೆಗಾಗಿ ನಾಲ್ಕು ಜನರನ್ನು ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಕ್ಕೆ ಅನುಗುಣವಾಗಿ ತೆಗೆದುಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ: | **ಸರ್ಕಾರದ ನಿಯಮಾವಳಿ ಪ್ರಕಾರ ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ನ್ಯಾಯಕ್ಕೆ ಅನುಗುಣವಾಗಿ ಸ್ಥಳೀಯ 4 ಜನರಿಗೆ ಕಸಂವಿಯು ಉದ್ಯೋಗ ನೀಡಲು ಸಭೆಯು ಅನುಮೋದಿಸಿತು. ಅವರ ಸೇವೆಯನ್ನು ಸದರಿ ಭೂಮಿಯ ನಿರ್ವಹಣೆಗಾಗಿ ಬಳಸಿಕೊಳ್ಳುವುದೆಂದು ಸಭೆಯು ನಿರ್ಣಯಿಸಿತು.** |
| **ವಿಷಯ 14 :** | **ಅಖಿಲ ಕರ್ನಾಟಕ ಸಂಸ್ಕೃತ ಕಾಲೇಜುಗಳ ಪ್ರಾಚಾರ್ಯರ ಸಂಘ (ರಿ)ಕ್ಕೆ ಪಠ್ಯಪುಸ್ತಕಗಳನ್ನು ಶೇ 10 ರಿಯಾಯಿತಿ ದರದಲ್ಲಿ ನೀಡುವ ಬಗೆಗೆ** |
| ಟಿಪ್ಪಣಿ : | ರಾಜ್ಯದಲ್ಲಿನ ಸಂಸ್ಕೃತ ಪಾಠಶಾಲೆಗಳಿಗೆ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ಪಠ್ಯ ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡುವ ಬಗ್ಗೆ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ಮುಖಾಂತರ ಕ್ರಮ ಜರುಗಿಸಲಾಗುತ್ತಿದೆ. ಅಖಿಲ ಕರ್ನಾಟಕ ಸಂಸ್ಕೃತ ಕಾಲೇಜುಗಳ ಪ್ರಾಚಾರ್ಯರ ಸಂಘ (ರಿ)ದ ಅಧ್ಯಕ್ಷರು, ಶ್ರೀ ಆದಿಚುಂಚನಗಿರಿ ಕ್ಷೇತ್ರದವರು ದಿನಾಂಕ 08.09.2014ರಂದು ಮನವಿ ಸಲ್ಲಿಸಿ, ಪಾಠಶಾಲಾ ಶಿಕ್ಷಕರ ಸಂಘಕ್ಕೆ ರಿಯಾಯಿತಿ 10% ದರದಲ್ಲಿ ಸರಬರಾಜು ಮಾಡಿರುವಂತೆ ತಮಗೂ ರಿಯಾಯಿತಿ ದರದಲ್ಲಿ ಸರಬರಾಜು ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ: | **ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘಕ್ಕೆ ಮತ್ತು ಇತರ ಯಾವುದೇ ಸಂಸ್ಥೆಗೆ 10% ರಿಯಾಯಿತಿ ದರದಲ್ಲಿ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ಪಠ್ಯಪುಸ್ತಕಗಳನ್ನು ಸರಬರಾಜು ಮಾಡಲು ಸಭೆಯು ಒಪ್ಪಿಗೆ ಸೂಚಿಸಿತು. ಸಾಗಾವಣೆ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಗಳು ವಹಿಸಿಕೊಳ್ಳಬೇಕೆಂದು ಸಭೆಯು ಸೂಚಿಸಿತು.** |
| **ವಿಷಯ 15 :** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಹೀರಾತನ್ನು ನೀಡಿರುವ ಬಗೆಗೆ** |
| ಟಿಪ್ಪಣಿ : | ವೇದ ಸಂಸ್ಕೃತಿ ಸಂಸ್ಥೆಗೆ ರೂ. 8500/–, ಸುಧರ್ಮಾ ಸಂಸ್ಕೃತ ದಿನಪತ್ರಿಕೆ, ಮೈಸೂರು – ರೂ. 10,000/, ಬೆಂಗಳೂರು ನಗರ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ರೂ. 5000/–, ಸಂಭಾಷಣಾ ಸಂದೇಶ, ಸಂಸ್ಕೃತ ಮಾಸಪತ್ರಿಕೆಗಾಗಿ ರೂ. 15000/– ಈ ಪ್ರಕಾರ ಈ ಎಲ್ಲ ಸಂಘ ಸಂಸ್ಥೆಗಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಜಾಹಿರಾತನ್ನು ನೀಡಲಾಗಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ: | **ಈ ಕ್ರಮವನ್ನು ಅನುಮೋದಿಸುತ್ತಾ ಸಂಸ್ಕೃತಕ್ಕೆ ಪ್ರೋತ್ಸಾಹ ನೀಡಲು ವಿವಿಧ ಸಂಸ್ಥೆಗಳಿಗೆ ಜಾಹೀರಾತನ್ನು ನೀಡಲು ಗರಿಷ್ಠ 1,00,000/– ರೂಗಳನ್ನು ವರ್ಷಕ್ಕೆ ನೀಡಲು ಸಭೆಯು ಅನುಮೋದಿಸಿತು. ಒಂದು ಸಂಸ್ಥೆಗೆ ಒಂದು ಬಾರಿ ಮಾತ್ರ ಗರಿಷ್ಠ 15000/– ರೂ ಮೊತ್ತದ ಜಾಹೀರಾತನ್ನು ನೀಡಲು ಸಭೆಯು ಅನುಮೋದಿಸಿತು. ಕುಲಪತಿಗಳು ಈ ವಿಷಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಬಹುದು.** |
| **ವಿಷಯ 16 :** | **ಶ್ರೀ ಸಿದ್ಧಯ್ಯ ಎಸ್., ವಿಶ್ರಾಂತಿಗೃಹ ಮೇಲ್ವಿಚಾರಕರು, ಕಸಂವಿ ಇವರ ವೇತನಶ್ರೇಣಿಯ ವ್ಯತ್ಯಾಸ ಸರಿಪಡಿಸುವ ಬಗೆಗೆ** |
| ಟಿಪ್ಪಣಿ : | ಶ್ರೀ ಸಿದ್ಧಯ್ಯ ಎಸ್. ಇವರು ಕಸಂವಿಯಲ್ಲಿ ದಿ. 11.10.2013ರಿಂದ ವಿಶ್ರಾಂತಿಗೃಹ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ವೇತನಶ್ರೇಣಿ ರೂ. 10400–16400 ನಿಗದಿಪಡಿಸಲಾಗಿದೆ. ಆದರೆ ಈ ಹುದ್ದೆ ಮತ್ತು ವಿದ್ಯಾರ್ಹತೆಗೆ ಸಮನಾದ ವೇತನಶ್ರೇಣಿ ರೂ. 13600–26000 ನಿಗದಿಪಡಿಸುವಂತೆ ಮನವಿ ಸಲ್ಲಿಸಿದ್ದಾರೆ. ಈ ಸಂಬಂಧದಲ್ಲಿ ನಿಯಮಗಳ ಹಿನ್ನೆಲೆಯಲ್ಲಿ ಸೂಕ್ತ ನಿರ್ದೇಶನಕ್ಕಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ: | **ಶ್ರೀ ಸಿದ್ಧಯ್ಯ ಇವರ ವೇತನ ಶ್ರೇಣಿಯ ವ್ಯತ್ಯಾಸವನ್ನು ಸರಿಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಪತ್ರ ಕಳುಹಿಸಲು ಸಭೆಯು ಸೂಚಿಸಿತು.** |

**ವಿಷಯ 17 :** **ಡಾ. ವೀರನಾರಾಯಣ ಪಾಂಡುರಂಗಿ, ಸಹ ಪ್ರಾಧ್ಯಾಪಕರು, ಕ.ಸಂ.ವಿ., ಇವರ ಸಂರಕ್ಷಿತ ವೇತನ ಮಾರ್ಚಿ 2014ರಿಂದ ನಿಗದಿಪಡಿಸುವ ಬಗೆಗೆ**

ಟಿಪ್ಪಣಿ : ಡಾ. ವೀರನಾರಾಯಣ ಪಾಂಡುರಂಗಿ, ಸಹ ಪ್ರಾಧ್ಯಾಪಕರು, ಕ.ಸಂ.ವಿ., ಇವರು ದಿನಾಂಕ 05.03.2014ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಅಂದಿನಿಂದ ಸಂರಕ್ಷಿತ ವೇತನ ನಿಗದಿಪಡಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. ದಿನಾಂಕ : 07.05.2014ರ ಪ್ರಶಾಸನ ಸಮಿತಿಯ ಸಭೆಯಲ್ಲಿ ಮೇ 2014ರಿಂದ ತಪ್ಪಾಗಿ ಅನುಮೋದಿಸಿರುವುದನ್ನು ಪರಿಷ್ಕರಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಡಾ. ವೀರನಾರಾಯಣ ಪಾಂಡುರಂಗಿ, ಸಹಪ್ರಾಧ್ಯಾಪಕರು ಇವರ ಸಂರಕ್ಷಿತ ವೇತನವನ್ನು ನಿರ್ಣಯಾನುಸಾರ ದಿ. 05.03.2014ರಿಂದ ನಿಗದಿಪಡಿಸಿ ಪರಿಷ್ಕರಿಸಲು ಸಭೆಯು ಅನುಮೋದಿಸಿತು.**

**ವಿಷಯ 18 :** **ಜನವರಿ 10–11, 2015ರಂದು ವಿಶ್ವವಿದ್ಯಾಲಯವು, ಯೋಗ ಪರಿಜ್ಞಾನ ಪ್ರತಿಷ್ಠಾನ (ರಿ.), ಬೆಂಗಳೂರು – ಈ ಸಂಸ್ಥೆಯ ಸಹಯೋಗದೊಂದಿಗೆ "ಆಯುರ್ವೇದ, ಯೋಗ ಮತ್ತು ವೇದಾಂತ ಸಂಪ್ರದಾಯಗಳು : ಶಾಸ್ತ್ರೀಯ ಮತ್ತು ಆಧುನಿಕ ದೃಷ್ಟಿಕೋನಗಳು" ಎಂಬ ವಿಷಯದ ಬಗೆಗೆ ಸಮ್ಮೇಳನ ನಡೆಸುವ ಬಗೆಗೆ**

ಟಿಪ್ಪಣಿ : ಜನವರಿ 10–11, 2015ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು, ಯೋಗ ಪರಿಜ್ಞಾನ ಪ್ರತಿಷ್ಠಾನ (ರಿ.), ಬೆಂಗಳೂರು – ಈ ಸಂಸ್ಥೆಯ ಸಹಯೋಗದೊಂದಿಗೆ "ಆಯುರ್ವೇದ, ಯೋಗ ಮತ್ತು ವೇದಾಂತ ಸಂಪ್ರದಾಯಗಳು : ಶಾಸ್ತ್ರೀಯ ಮತ್ತು ಆಧುನಿಕ ದೃಷ್ಟಿಕೋನಗಳು" ಎಂಬ ವಿಷಯದ ಬಗೆಗೆ 2 ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲು ಬಯಸಿದೆ. ಹಲವು ವಿದೇಶಿ ಪ್ರತಿನಿಧಿಗಳು, 200ಕ್ಕೂ ಹೆಚ್ಚು ಭಾರತೀಯ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ಸಮ್ಮೇಳನದಲ್ಲಿ ವಸ್ತು ಪ್ರದರ್ಶನವೂ ಆಯೋಜಿಸಲ್ಪಟ್ಟಿದೆ. ವಿಶ್ವವಿದ್ಯಾಲಯವು ಈ ಸಮ್ಮೇಳನವನ್ನು ಆಯೋಜಿಸಿರುವುದರಿಂದ ಸ್ಥಳಾವಕಾಶವನ್ನು ಯೋಗ ಪರಿಜ್ಞಾನ ಪ್ರತಿಷ್ಠಾನದವರು ಕೇಳಿರುತ್ತಾರೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಯೋಗ ಪರಿಜ್ಞಾನ ಪ್ರತಿಷ್ಠಾನವು ಕಸಂವಿ ಸಹಯೋಗದೊಂದಿಗೆ ನಡೆಸುವ ಅಂತರ ರಾಷ್ಟ್ರೀಯ ಸಮ್ಮೇಳನಕ್ಕೆ ಒಂದು ಲಕ್ಷ ರೂಪಾಯಿ ಅನುದಾನವನ್ನು ನೀಡಲು ಸಭೆಯು ಒಪ್ಪಿತು. ಇದರಲ್ಲಿ ಆಹ್ವಾನಿತ ವಿದ್ವಾಂಸರಿಗೆ ನೀಡುವ ಗೌರವಧನ, ಪ್ರಯಾಣಭತ್ಯೆ (ರೇಲ್ 3 ಟೈರ್ ಎ.ಸಿ), ಆಹ್ವಾನ ಪತ್ರಿಕೆ, ಫ್ಲೆಕ್ಸ್, ಬ್ಯಾನರ್ ಮುಂತಾದವುಗಳಿಗೆ ನೇರವಾಗಿ ಹಣವನ್ನು ಸಂದಾಯ ಮಾಡಲು ಸಭೆಯು ತೀರ್ಮಾನಿಸಿತು. ಕಸಂವಿ ಕಡೆಯಿಂದ 10 ಪ್ರತಿನಿಧಿಗಳಿಗೆ ಉಚಿತವಾಗಿ ಹಾಗೂ ಮಿಕ್ಕವರಿಗೆ ಶೇ 50% ರಿಯಾಯಿತಿಯಲ್ಲಿ ಪ್ರತಿನಿಧಿ ಶುಲ್ಕವನ್ನು ನೀಡಲು ಯೋಗ ಪರಿಜ್ಞಾನ ಪ್ರತಿಷ್ಠಾನವು ಒಪ್ಪಿಗೆ ನೀಡಬೇಕೆಂದು ಸೂಚಿಸಲಾಯಿತು.**

**ವಿಷಯ 19 :** **ಶ್ರೀ ಶ್ರೀಮಾತಾ ಸಂಸ್ಕೃತ ವೈದಿಕ ಶಿಕ್ಷಣ ಸಂಸ್ಥೆ (ರಿ.) ಇವರು ನಡೆಸುವ ಅನುದಾನಿತ ಸಂಸ್ಕೃತ ಕಾಲೇಜಿನಲ್ಲಿ ತೆರವಾದ 3 (ಮೂರು) ಬೋಧಕ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡುವ ಬಗೆಗೆ**

ಟಿಪ್ಪಣಿ : 52 ವರ್ಷಗಳಿಂದ ಗ್ರಾಮೀಣ ಪ್ರದೇಶದಲ್ಲಿ ವೇದ/ಸಂಸ್ಕೃತ ಶಿಕ್ಷಣ ಪ್ರಚಾರ ನಡೆಸುತ್ತಿರುವ ಶ್ರೀ ಶ್ರೀಮಾತಾ ಸಂಸ್ಕೃತ ವೈದಿಕ ಶಿಕ್ಷಣ ಸಂಸ್ಥೆ (ರಿ.) ಇವರು ನಡೆಸುವ ಶ್ರೀಮಾತಾ ಸಂಸ್ಕೃತ ಕಾಲೇಜು – ಈ ಅನುದಾನಿತ ಸಂಸ್ಕೃತ ಕಾಲೇಜಿನಲ್ಲಿ ಸರ್ಕಾರದ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದ ಅನುದಾನಸಹಿತವಾದ 3 (ಮೂರು) ಸಹಾಯಕ ಪ್ರಾಧ್ಯಾಪಕ ಹುದ್ದೆಗಳು 2012–13ನೇ ಸಾಲಿನಲ್ಲಿ ರಾಜೀನಾಮೆ ಹಾಗೂ ಪದೋನ್ನತಿಯ ಕಾರಣದಿಂದ ಖಾಲಿ ಇವೆ. ಈ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡುವ ಸಂಬಂಧ ಸದರಿ ಸಂಸ್ಥೆಯ ಗೌರವ ಕಾರ್ಯದರ್ಶಿಗಳು ಪತ್ರಿಸಿದ್ದು, ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಈ ಸಂಬಂಧ ಮಾನ್ಯ ಉನ್ನತ ಶಿಕ್ಷಣ ಸಚಿವರು ಒಂದು ನಿರ್ದೇಶನ ಪತ್ರ ಕಳುಹಿಸಿರುತ್ತಾರೆ.

ನಿರ್ಣಯ: **ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 3 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ತುಂಬಿಕೊಳ್ಳಲು ಸರ್ಕಾರದ ಅನುಮತಿ ಅಗತ್ಯವಿದೆ ಎಂದು ಸಭೆಯು ತಿಳಿಸಿ ಈ ಸಂಬಂಧ ಶೀಘ್ರವೇ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಸಭೆಯು ಸೂಚಿಸಿತು.**

**ವಿಷಯ 20 : ಜ್ಯೋತಿಷ್ಯ ಅಧ್ಯಯನ ಕೇಂದ್ರ ಎಂದು ಮಾನ್ಯತೆ ನೀಡಿರುವ ಬಗೆಗೆ**

ಟಿಪ್ಪಣಿ : ಶ್ರೀ ಮಹರ್ಷಿ ಆನಂದ ಜ್ಯೋತಿಷ್ಯ ಅಧ್ಯಯನ ಕೇಂದ್ರ, ಬ್ರಹ್ಮಶ್ರೀ ಆನಂದ ಸಿದ್ಧಿ ಪೀಠಂ, ರಾಮನಗರ ಮತ್ತು ಶ್ರೀ ಡಿ. ಎಂ.ಎಸ್ ಜ್ಯೋತಿಷ್ಯ, ಸಂಸ್ಕೃತ–ವೇದ ಅಧ್ಯಯನ ಕೇಂದ್ರ, ಶ್ರೀ ಚಂದ್ರವನ ಆಶ್ರಮ, ಶ್ರೀರಂಗಪಟ್ಟಣ ಈ ಎರಡು ಜ್ಯೋತಿಷ್ಯ ಅಧ್ಯಯನ ಸಂಸ್ಥೆಗಳಿಗೆ ತ್ರಿಸದಸ್ಯ ಸಮಿತಿಯ ಪರಿಶೀಲನಾವರದಿ, ಜ್ಯೋತಿಷ್ಯ ಪರಿನಿಯಮಗಳ ಅನುಸಾರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಪ್ರಶಿಕ್ಷಣ ಪರಿಷತ್ತಿನ ಹಾಗೂ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಜ್ಯೋತಿಷ್ಯ ಅಧ್ಯಯನ ಕೇಂದ್ರ ಎಂದು ಮಾನ್ಯತೆ ನೀಡಲಾಗಿದೆ. ಈ ಸಂಬಂಧ ಸಭೆಯಲ್ಲಿ ಅನುಮತಿಯನ್ನು ಕೋರಿದೆ.

ನಿರ್ಣಯ: **ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ರಾಮನಗರ ಹಾಗೂ ಶ್ರೀರಂಗಪಟ್ಟಣದ ಜ್ಯೋತಿಷ್ಯ ಅಧ್ಯಯನ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡಲು ಸಭೆಯು ಅನುಮೋದಿಸಿತು.**

**ವಿಷಯ 21 : ಒಂದು ವರ್ಷ ಸೇವೆ ಸಲ್ಲಿಸಿರುವ ಡಾ. ವಿ. ಗಿರೀಶ ಚಂದ್ರ ಹಾಗೂ ಡಾ. ಶ್ರೀನಿವಾಸ ವರಖೇಡಿ ಇವರ ಖಾಯಂಪೂರ್ವಸೇವಾ ಅವಧಿಯನ್ನು ಘೋಷಿಸುವ ಬಗೆಗೆ.**

ಟಿಪ್ಪಣಿ: ಜೂನ್ 2013ರಲ್ಲಿ ಈ ಮೇಲ್ಕಂಡ ಇಬ್ಬರು ಆಯ್ಕೆ ಸಮಿತಿಯ ಆಯ್ಕೆಯಂತೆ ದಿ.13.06.2014ರಂದು ಪ್ರಾಧ್ಯಾಪಕರಾಗಿ ಆಯ್ಕೆಯಾಗಿ, ದಿ. 14.06.2013ರ ಪ್ರಶಾಸನ ಸಮಿತಿಯ ಠರಾವಿನಂತೆ (ಸಂಖ್ಯೆ–6) ಆಯ್ಕೆ ಮಾಡಲಾಗಿದ್ದು, ಅವರು ಸೇವೆಗೆ ಸೇರಿಕೊಂಡರು.

ದಿ. 01.01.2013ರಂದು ಕಸಂವಿಯು ಪ್ರಾಧ್ಯಾಪಕರ ಹುದ್ದೆಯ ಬಗೆಗೆ ದಿನಪತ್ರಿಕೆಯಲ್ಲಿ ಅಧಿಸೂಚನೆ ಹೊರಡಿಸಿತ್ತು (KSU UGC-Ps1/Professor/2012-2013)

ಕಸಂವಿಯ ಸಿ ಮತ್ತು ಆರ್ ನಿಯಮಗಳು, ಕೆ.ಸಿ.ಎಸ್.ಆರ್ ನಿಯಮಾವಳಿಗಳು ಹಾಗೂ ಯು.ಜಿ.ಸಿ ನಿಯಮಾವಳಿಗಳ ಪ್ರಕಾರ ಖಾಯಂಪೂರ್ವ ಸೇವಾ ಅವಧಿಯು ಎರಡು ವರ್ಷಗಳವರೆಗೆ ನಿಗದಿಯಾಗಿದೆ. ಇಡೀ ಪ್ರಾಧ್ಯಾಪಕರ ಅಧಿಸೂಚನೆಯ ಬಗ್ಗೆ ಹಾಗೂ ಈ ಇಬ್ಬರು ಪ್ರಾಧ್ಯಾಪಕರ ಆಯ್ಕೆಯ ಬಗ್ಗೆ ಆಯ್ಕೆಯಾಗದ ಅಭ್ಯರ್ಥಿಗಳು ಕರ್ನಾಟಕದ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ನ್ಯಾಯಾಂಗ ಪರಿಶೀಲನೆಯಲ್ಲಿದೆ. ಅನುಕ್ರಮವಾಗಿ ಮೊಕದ್ದಮೆ ಸಂಖ್ಯೆಗಳು– ಡಾ. ಶ್ರೀನಿವಾಸ ವರಖೇಡಿ ರಿಟ್ ಪಿಟಿಷನ್ ಸಂಖ್ಯೆ 32861/2013, ಡಾ. ಗಿರೀಶ್ ಚಂದ್ರ ರಿಟ್ ಪಿಟಿಷನ್ ಸಂಖ್ಯೆ 31097/2013

ದಿ. 18.02.2014ರ ಪ್ರಶಾಸನಸಭೆಯ ನಡಾವಳಿಯಲ್ಲಿ ಪ್ರಾಧ್ಯಾಪಕರ ಖಾಯಂಪೂರ್ವ ಸೇವಾ ಅವಧಿಯನ್ನು ಒಂದು ವರ್ಷಕ್ಕೆ ಇಳಿಸಿ ನಿರ್ಣಯ ಹೊರಡಿಸಲಾಗಿದ್ದು, ಆ ಸಭೆಯ ನಡಾವಳಿಯಲ್ಲಿ ಅಂದಿನ ಕುಲಸಚಿವರು ಹಾಗೂ ಕುಲಪತಿಗಳ ಸಹಿ ಇರುವುದಿಲ್ಲ. ಇದರ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯು ತನ್ನ ಆಕ್ಷೇಪಣೆಯನ್ನು ಪತ್ರಮೂಲಕ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಕೆ.ಸಿ.ಎಸ್.ಆರ್, ಯು.ಜಿ.ಸಿ ಹಾಗೂ ಕಸಂವಿಯ ಸಿ ಮತ್ತು ಆರ್ ನಿಯಮಗಳನ್ನು ಉಲ್ಲಂಘಿಸಿ, ಎರಡು ವರ್ಷಗಳ ಖಾಯಂಪೂರ್ವ ಸೇವಾ ಅವಧಿಯನ್ನು ಒಂದು ವರ್ಷಕ್ಕೆ ಇಳಿಸಲು ಅವಕಾಶವಿರುವುದಿಲ್ಲ. ಪ್ರಶಾಸನಸಭೆಯು ಈ ವಿಷಯದ ಬಗ್ಗೆ ಚರ್ಚಿಸಲು ವಿಷಯವನ್ನು ಮಂಡಿಸಿದೆ.

ನಿರ್ಣಯ: **ಈ ಪ್ರಕರಣದಲ್ಲಿ ಪ್ರಾಧ್ಯಾಪಕರಾದ ಡಾ. ಶ್ರೀನಿವಾಸ ವರಖೇಡಿಯವರೇ ಪ್ರಭಾರಿ ಕುಲಪತಿಯಾಗಿರುವುದರಿಂದ ಈ ವಿಷಯವನ್ನು ಮುಂದೂಡಲಾಯಿತು. ಪ್ರಾಧ್ಯಾಪಕರು ಹಾಗೂ ಪ್ರಭಾರಿ ಕುಲಪತಿಗಳಾದ ಪ್ರೊ. ಶ್ರೀನಿವಾಸ ವರಖೇಡಿ ಅವರ ವಾರ್ಷಿಕ ಬಡ್ತಿಯನ್ನು ನಿಯಮಾನುಸಾರ ನೀಡಲು ಸಭೆಯು ಒಪ್ಪಿತು.**

**ವಿಷಯ 22:** **ಕಸಂವಿಯ ಬೋಧಕ/ಬೋಧಕೇತರ ಸಿಬ್ಬಂದಿ ನೇಮಕಾತಿಯ ಬಗೆಗೆ ದೂರು ಮತ್ತು ಶ್ರೀ ಪ್ರಕಾಶ್ ಆರ್. ಪಾಗೋಜಿ ಇವರ ವಿರುದ್ಧ ಶಿಸ್ತು ಕ್ರಮದ ಬಗ್ಗೆ.**

ಟಿಪ್ಪಣಿ: ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಪ್ರಕಾಶ್ ಆರ್. ಪಾಗೋಜಿ ಇವರು ಅನರ್ಹ ಅರ್ಜಿಯ ಜೊತೆಗೆ ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿ ಕಸಂವಿಯ ಉಪಕುಲಸಚಿವರ ಹುದ್ದೆಗೆ ನೇಮಕಗೊಂಡಿರುವ ಬಗ್ಗೆ ಶ್ರೀ ಗಂಗಾಧರಪ್ಪ ಬಿ.ಓ ಇವರು ಸರ್ಕಾರಕ್ಕೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರುಗಳನ್ನು ಉನ್ನತ ಶಿಕ್ಷಣ ಇಲಾಖೆಯು ಪರಿಶೀಲಿಸಿದ್ದು, ಅದರಂತೆ ಶ್ರೀ ಪ್ರಕಾಶ್ ಆರ್ ಪಾಗೋಜಿ ಇವರನ್ನು ಉಪಕುಲಸಚಿವರ ಹುದ್ದೆಗೆ ಅಕ್ರಮವಾಗಿ ನೇಮಕ ಮಾಡಿರುವುದಾಗಿ ಕಂಡು ಬರುತ್ತದೆ ಎಂದು ದೂರುದಾರರು ವಾದಿಸಿರುತ್ತಾರೆ. ಆದ್ದರಿಂದ, ಶ್ರೀ ಪ್ರಕಾಶ್ ಆರ್.ಪಾಗೋಜಿ ಇವರ ನೇಮಕಾತಿ ಆದೇಶವನ್ನು ಕೂಡಲೇ ರದ್ದುಪಡಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವಂತೆ ಹಾಗೂ ಶ್ರೀ ಗಂಗಾಧರಪ್ಪ ಬಿ. ಓ. ಇವರು ಸಲ್ಲಿಸಿರುವ ದೂರಿನ ಬಗ್ಗೆ ಪರಿಶೀಲಿಸಿ, ತನಿಖೆ ನಡೆಸಿ, ತನಿಖಾ ವರದಿಯನ್ನು 10 ದಿವಸಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದ ಅಧೀನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು) ದಿ. 16.08.2014ರ **"ತುರ್ತು"** ಪತ್ರ ಸಂಖ್ಯೆ ಇಡಿ 105 ಯುಎನ್‌ಇ 2014ನಲ್ಲಿ ತಿಳಿಸಿದ್ದಾರೆ. ಅದರಂತೆ ಕುಲಸಚಿವರು ಬಹಳ ಗೌಪ್ಯವಾದ ಒಂದು ಕಡತವನ್ನು ಪ್ರಾರಂಭಿಸಿ (ಕಸಂವಿ/ಸಿಬ್ಬಂದಿ/ಶಿಸ್ತಿನ ಕ್ರಮ–01/2014–15) ಮಾನ್ಯ ಪ್ರಭಾರ ಕುಲಪತಿಗಳಿಗೆ 25.08.2014ರಂದು ಶ್ರೀ ಪ್ರಕಾಶ್ ಆರ್ ಪಾಗೋಜಿ ಇವರ ತನಿಖೆ/ವಿಚಾರಣೆ ಖಾದಿರಿಸಿ ತಕ್ಷಣದಲ್ಲಿ ಅಮಾನತ್ತಿನಲ್ಲಿಡಲು ಕಡತವನ್ನು ಸಲ್ಲಿಸಿದ್ದರು. ಮಾನ್ಯ ಕುಲಪತಿಗಳು ಕಸಂವಿಯ ಹಿರಿಯ ನ್ಯಾಯವಾದಿಗಳ ಅಭಿಪ್ರಾಯವನ್ನು ಪಡೆದು, ಪ್ರಶಾಸನ ಸಮಿತಿಯಲ್ಲಿ ಇಡಲು ಆದೇಶಿಸಿದ್ದರು.

ಉನ್ನತ ಶಿಕ್ಷಣ ಇಲಾಖೆಯ ಪತ್ರದ ಸೂಚನೆಯಂತೆ ಕುಲಸಚಿವರು ದಿ. 01.09.2014ರಂದು ಐದು ಜನ ಸದಸ್ಯರ ತನಿಖಾಪಟ್ಟಿ (ಸಂಭಾವ್ಯವನ್ನು) ಅನುಮೋದಿಸಲು ಮಾನ್ಯ ಪ್ರಭಾರ ಕುಲಪತಿಗಳಿಗೆ ಕಡತ ಸಲ್ಲಿಸಿದ್ದರು. ಅದನ್ನೂ ಸಹ ಪ್ರಶಾಸನ ಸಮಿತಿಯ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ವಿದ್ವಾನ್ ಪಿ. ಆರ್. ಪಾಗೋಜಿ, ಅವರು ಉಪಕುಲಸಚಿವರ ಹುದ್ದೆಯಲ್ಲಿ ಖಾಯಂಪೂರ್ವ ಸೇವಾ ಅವಧಿಯನ್ನು ಪೂರೈಸಿದ್ದರೂ, ಸರ್ಕಾರವು ಶಿಸ್ತಿನ ಕ್ರಮವನ್ನು ಕೈಗೊಂಡು ವರದಿಯನ್ನು ಸಲ್ಲಿಸಬೇಕೆಂದು ನಿರ್ದೇಶಿಸಿದ್ದರಿಂದ ಈ ಕೆಳಕಂಡ ಅಂಶಗಳನ್ನು ಕಸಂವಿಯು ಕೈಗೊಳ್ಳಲು ಪ್ರಶಾಸನ ಸಮಿತಿ ಸಭೆಯು ನಿರ್ದೇಶಿಸಿತು.**

**ಅ) ಖಾಯಂಪೂರ್ವ ಸೇವಾವಧಿ ಘೋಷಣೆಯ ವಿಷಯವನ್ನು ಮುಂದೂಡಲಾಯಿತು.**

**ಆ) ಸದರಿಯವರ ನೇಮಕಾತಿ/ಅವ್ಯವಹಾರಕ್ಕೆ ಸಂಬಂಧಿಸಿದಂತೆ ಕಸಂವಿಯು ಸರ್ಕಾರಕ್ಕೆ ವಿಸ್ತೃತವಾದ ಮಾಹಿತಿಯನ್ನು ಸಿದ್ಧಪಡಿಸಿ ಜರೂರು ಕಳುಹಿಸತಕ್ಕದ್ದು. ಈ ಮಾಹಿತಿಯಲ್ಲಿ ಉಪಕುಲಸಚಿವ ನೇಮಕಾತಿಗೆ ಸಂಬಂಧಿಸಿದ ಎಲ್ಲ ಪರ–ವಿರೋಧ ಅಂಶಗಳನ್ನು ಸತ್ಯಾಂಶಗಳೊಂದಿಗೆ ವರದಿ ಮಾಡತಕ್ಕದ್ದು. ಈ ಹಿನ್ನೆಲೆಯಲ್ಲಿ ಇದಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ, ಕಸಂವಿಯು ನೇಮಕ ಮಾಡಿರುವ ನ್ಯಾಯವಾದಿಗಳ ಅಭಿಪ್ರಾಯಗಳು ಮುಂತಾದ ಸಮಸ್ತ ಅಂಶಗಳನ್ನು ವಸ್ತುನಿಷ್ಠವಾಗಿ ಸಿದ್ಧಪಡಿಸಿ ಸರ್ಕಾರಕ್ಕೆ ಆದಷ್ಟು ಶೀಘ್ರವೇ ಕಳುಹಿಸತಕ್ಕದ್ದು.**

**ಇ) ಈ ಪ್ರಕರಣವು ಕರ್ನಾಟಕದ ಮಾನ್ಯ ಉಚ್ಚ ನ್ಯಾಯಾಲಯದ ವಿಚಾರಣೆಯಲ್ಲಿ ಇರುವಾಗ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಸ್ಪಷ್ಟ ನಿರ್ದೇಶನವನ್ನು ಕೋರುವುದು.**

**ವಿಷಯ 23 :** **ವಿದ್ವಾನ್ ಪಿ. ಆರ್. ಪಾಗೋಜಿ ಅವರನ್ನು ಹೆಚ್ಚುವರಿ ಕಾರ್ಯವಾದ ಹಣಕಾಸು ಅಧಿಕಾರಿ ಸ್ಥಾನದಿಂದ ಬಿಡುಗಡೆ ಮಾಡುವ ಬಗೆಗೆ**

**ಟಿಪ್ಪಣಿ :** ವಿದ್ವಾನ್ ಪಿ. ಆರ್. ಪಾಗೋಜಿ, ಅವರು ಇಲ್ಲಿಯವರೆಗೆ ಹಣಕಾಸು ಅಧಿಕಾರಿಯಾಗಿ ಕೆಲಸಗಳನ್ನು ನಿರ್ವಹಿಸಿದ್ದಾರೆ. ಜೂನ್ 2014ರಲ್ಲಿ ತಮಗೆ ಈ ಹೆಚ್ಚುವರಿ ಕಾರ್ಯಭಾರದಿಂದ ಬಿಡುಗಡೆ ಮಾಡಬೇಕೆಂದು ಕೋರಿದ್ದರು. ಕ.ಸಂ.ವಿಯು ಕರ್ನಾಟಕ ಸರ್ಕಾರದ ಪತ್ರಾಂಕಿತ ಇಲಾಖೆಗೆ ಈ ವಿಷಯದ ಬಗೆಗೆ ಪತ್ರ ಬರೆದಿದ್ದು, ಇನ್ನೂ ಪ್ರತಿಕ್ರಿಯೆ ಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅವರನ್ನು ಆ ಹೆಚ್ಚುವರಿ ಸ್ಥಾನದಿಂದ ನಿಡುಗಡೆ ಮಾಡಿ, ಅವರ ಸ್ಥಾನಕ್ಕೆ ಸೂಕ್ತ ವ್ಯಕ್ತಿಯನ್ನು ಹಂಗಾಮಿಯಾಗಿ ನೇಮಕ ಮಾಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: ವಿದ್ವಾನ್ ಪಿ. ಆರ್. ಪಾಗೋಜಿ, ಅವರು ಇಲ್ಲಿಯವರೆಗೆ ಹಣಕಾಸು ಅಧಿಕಾರಿಯಾಗಿ ಕೆಲಸಗಳನ್ನು ನಿರ್ವಹಿಸುತ್ತಿದ್ದು, ಜೂನ್ 2014ರಲ್ಲಿ ಈ ಹೆಚ್ಚುವರಿ ಕಾರ್ಯಭಾರದಿಂದ ಬಿಡುಗಡೆಹೊಂದಲು ಕೋರಿದ್ದರು. ವಿಶ್ವವಿದ್ಯಾಲಯದ ಅಧಿನಿಯಮದಂತೆ ಮಾನ್ಯ ಕುಲಪತಿಗಳು ಈ ಬಗೆಗೆ ಅಗತ್ಯಕ್ಕೆ ತಕ್ಕಂತೆ ಸೂಕ್ತ ನಿರ್ಧಾರವನ್ನು ಕೈಗೊಳ್ಳಬಹುದೆಂದು ಸೂಚಿಸಲಾಯಿತು. ಸರಕಾರಕ್ಕೆ ಜ್ಞಾಪನ ಪತ್ರವನ್ನು ಮತ್ತೊಮ್ಮೆ ಬರೆಯಲು ಸಭೆಯು ಸೂಚಿಸಿತು.

**ವಿಷಯ 24: ಸಂಸ್ಕೃತ ರೂಪಕೋತ್ಸವ ಮತ್ತು ಗಾಂಧಿಸ್ಮೃತಿ ರಾಷ್ಟ್ರೀಯ ಸಂಸ್ಕೃತ ಕವಿಸಂಗಮ ಕಾರ್ಯಕ್ರಮದ ವೆಚ್ಚವನ್ನು ಅನುಮೋದಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದಿನಾಂಕ 05.09.2014ರಂದು ಬೆಂಗಳೂರು ಗಾಯನ ಸಮಾಜದಲ್ಲಿ **"ಸಂಸ್ಕೃತ ರೂಪಕೋತ್ಸವ"** ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಮತ್ತು ದಿನಾಂಕ 09.09.2014ರಂದು ಗಾಂಧಿಭವನದಲ್ಲಿ **"ಗಾಂಧಿಸ್ಮೃತಿ ರಾಷ್ಟ್ರೀಯ ಸಂಸ್ಕೃತ ಕವಿಸಂಗಮ"** ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಇದರ ಒಟ್ಟು ವೆಚ್ಚವನ್ನು ಅನುಮೋದನೆಗಾಗಿ ಮಂಡಿಸಿದೆ.

**ಸಂಸ್ಕೃತ ರೂಪಕೋತ್ಸವ ಕಾರ್ಯಕ್ರಮದ ವೆಚ್ಚದ ವಿವರ**

| ಕ್ರ.ಸಂ | ವಿವರ | ಮೊತ್ತ |
|---|---|---|
| 1 | ಆಮಂತ್ರಣ ಪತ್ರಿಕೆ | 4,220.00 |
| 2 | ಭೋಜನ ವ್ಯವಸ್ಥೆ | 4,500.00 |
| 3 | ಸಭಾಂಗಣದ ಬಾಡಿಗೆ (ಒಂದು ದಿನಕ್ಕೆ) | 12,000.00 |
| 4 | ಅತಿಥಿಗಳ ಪ್ರಯಾಣ ಭತ್ಯೆ ಮತ್ತು ಸಭಾ/ಉಪನ್ಯಾಸ ಭತ್ಯೆ | 8,520.00 |
| 5 | ವಿದ್ಯಾರ್ಥಿಗಳ ಮತ್ತು ಮಾರ್ಗದರ್ಶಕರ ಪ್ರಯಾಣ ಭತ್ಯೆ | 47,877.00 |
| 6 | ಸ್ಪರ್ಧಾ ವಿಜೇತರಿಗೆ ಕೊಟ್ಟ ಬಹುಮಾನದ ಮೊತ್ತ(4ಬಹುಮಾನಗಳು) | 10,500.00 |
| 7 | ಸ್ಮರಣಿಕೆಗಳು | 3,209. .00 |
| 8 | ಫೋಟೋ | 4,000.00 |
| 9 | ಲೈಟಿಂಗ್ ಚಾರ್ಜ್ | 3,360.00 |
| 10 | ಸಾದಿಲ್ವಾರು ವೆಚ್ಚ | 13,384.00 |
| | **ಒಟ್ಟು ಮೊತ್ತ ರೂಪಾಯಿಗಳು** | ರೂ **1,11,570.00** |

**ಗಾಂಧಿಸ್ಮೃತಿ ಸಂಸ್ಕೃತ ಕವಿಸಂಗಮ ಕಾರ್ಯಕ್ರಮದ ಒಟ್ಟು ವೆಚ್ಚದ ವಿವರಗಳು**

| ಕ್ರ.ಸಂ | ವಿವರ | ಮೊತ್ತ |
|---|---|---|
| 1 | ಆಹ್ವಾನಿತರಿಗೆ ಗಣ್ಯ ಕವಿಗಳಿಗೆ ಪ್ರಯಾಣಭತ್ಯೆ ಮತ್ತು ಗೌರವಧನ | ರೂ. 21226/– |
| 2 | ಆಹ್ವಾನಿತರಿಗೆ ಗಣ್ಯ ಕವಿಗಳಿಗೆ ವಿಶ್ವವಿದ್ಯಾಲಯದ ಗ್ರಂಥಗಳ ವಿತರಣೆ | ರೂ. 3,000/– |
| 3 | ಫೋಟೋ | ರೂ. 1470/– |
| 4 | ಆಹ್ವಾನಪತ್ರಿಕೆಗಳ ಮುದ್ರಣ ವೆಚ್ಚ | ರೂ. 8545/– |
| **5** | **ಒಟ್ಟು ಮೊತ್ತ** | **ರೂ. 34241/–** |

ನಿರ್ಣಯ: ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಒಟ್ಟು ವೆಚ್ಚವನ್ನು ಸಭೆಯು ಅನುಮೋದಿಸಿ ಪ್ರತಿವರ್ಷ ರೂಪಕೋತ್ಸವವನ್ನು ನಡೆಸಲು ಸಭೆಯು ಸೂಚಿಸಿತು. ನವೆಂಬರ್ ಮಾಸದಲ್ಲಿ ರಾಜ್ಯೋತ್ಸವವನ್ನು ಆಚರಿಸಿ ಕನ್ನಡ–ಸಂಸ್ಕೃತ ಬಾಂಧವ್ಯಕ್ಕೆ ಹಾಗೂ ಎರಡು ಭಾಷೆಗಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿಚಾರಗೋಷ್ಠಿಯನ್ನು ಆಯೋಜಿಸಲು ಸೂಚನೆ ನೀಡಿ ಅದರ ವೆಚ್ಚಕ್ಕೆ ಒಪ್ಪಿಗೆ ನೀಡಿತು.

**ವಿಷಯ 25:** **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಹಾಗೂ ವಿವಿದ ಕಾನೂನು ಸಲಹೆಗಾರರ ಸೇವಾ ಶುಲ್ಕವನ್ನು ಪಾವತಿಸುವ ಬಗೆಗೆ**

**ಟಿಪ್ಪಣಿ:** ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಹಾಗೂ ವಿವಿಧ ಕಾನೂನು ಸಲಹೆಗಾರರಿಗೆ ಅನೇಕ ಕೋರ್ಟ್ ಕೇಸಿನ ವಿಚಾರಣೆಯನ್ನು ನಿರ್ವಹಿಸುತ್ತಿದ್ದು, ಈ ಕೇಸುಗಳ ವಾದ ಮಂಡನೆಯ ಖರ್ಚುವೆಚ್ಚಗಳ ಬಗೆಗೆ ಮತ್ತು ಸೇವಾ ಶುಲ್ಕದ ಬಗೆಗೆ ನಿಗದಿಪಡಿಸಲು ಪ್ರಶಾಸನ ಸಮಿತಿ ಸಭೆಯ ಅನುಮೋದನೆ ಕೋರಿದೆ.

**ನಿರ್ಣಯ:** **ಪ್ರತಿತಿಂಗಳು ನೀಡುವ ಮಾಸಿಕ ಗೌರವಧನ 10,000 ನಿಗಧಿಪಡಿಸುವುದು. ಅವರು ನಿರ್ದೇಶನಾಲಯಕ್ಕೆ ಎಲ್ಲ ಕಾನೂನು ವ್ಯವಹಾರಗಳಲ್ಲಿ ಉಚಿತವಾಗಿ ಸಲಹೆ ನೀಡುವುದು ಮತ್ತು ನ್ಯಾಯಾಲಯ/ಸರಕಾರದ ನ್ಯಾಯಮಂಡಳಿಗಳಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವುದು ಅವರ ಸೇವೆಯಲ್ಲಿ ಸೇರುತ್ತದೆ.**

**ಪ್ರತಿ ಪ್ರಕರಣದ ವಕಾಲತ್ತಿಗೆ – 2500/–**

**ಪ್ರತಿಪ್ರಕರಣದ ಲಿಖಿತ ವಾದ ದಾಖಲಿಸಲು – 5000/–**

**ಪ್ರತಿಪ್ರಕರಣದ ಅಂತಿಮ ವಾದ ಮಂಡಿಸಿ ನಿರ್ಣಯ ಪಡೆದ ನಂತರ – 15,000/–**

**ಎಲ್ಲ ಸೆಶನ್ ಸೇರಿ ಪ್ರಯಾಣ ಇತ್ಯಾದಿ ಅನುಷಂಗಿಕ ವೆಚ್ಚವನ್ನು ವಿಶೇಷ ಸಂದರ್ಭದಲ್ಲಿ ಅವರು ಪಡೆದು ಕೊಳ್ಳಬಹುದು. ಅವಶ್ಯವೆನಿಸಿದ ಪ್ರಕರಣಗಳಲ್ಲಿ ಹಿರಿಯ ನ್ಯಾಯವಾದಿಗಳನ್ನು ನಿಯೋಜಿಸಿದಾಗ ನಿಯಮಾನುಸಾರ ಅವರಿಗೆ ಸೇವಾಶುಲ್ಕವು ವಿಶ್ವವಿದ್ಯಾಲಯದ ಇಬ್ಬರೂ ಕಾನೂನು ಸಲಹಾಗಾರರಿಗೂ ಅನ್ವಯಿಸುತ್ತದೆ.**

**ವಿಷಯ 26:** **ಎಸ್ ಸಿ, ಎಸ್ ಟಿ, ಪ್ರ ವರ್ಗ–1 ರ ಅಭ್ಯರ್ಥಿಗಳಿಗೆ ಉಚಿತವಾಗಿ ನೂತನ ಪಠ್ಯ ಪುಸ್ತಕ ನೀಡುವ ಬಗೆಗೆ**

**ಟಿಪ್ಪಣಿ :** ರಾಜ್ಯದ ಅನುದಾನಿತ ಸಂಸ್ಕೃತ ಪಾಠಶಾಲೆಗಳ ಎಸ್ ಸಿ,ಎಸ್ ಟಿ, ಪ್ರ ವರ್ಗ–1 ರ ಅಭ್ಯರ್ಥಿಗಳಿಗೆ ಉಚಿತವಾಗಿ ನೂತನ ಪಠ್ಯ ಪುಸ್ತಕ ನೀಡುವ ಬಗೆಗೆ ಪಾಠಶಾಲೆಗಳಿಂದ ಮಾಹಿತಿ ಬಂದಿದ್ದು ಎಸ್ ಸಿ– ಎಸ್ ಟಿ– ಪ್ರ ವರ್ಗ–1 ಈ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕ ನೀಡಲು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. ಪ್ರಥಮಾ – 5000ವಿದ್ಯಾರ್ಥಿಗಳು, ಕಾವ್ಯ – 2000ವಿದ್ಯಾರ್ಥಿಗಳು, ಸಾಹಿತ್ಯ – 1050ವಿದ್ಯಾರ್ಥಿಗಳು. ಈ ತರಗತಿಗಳಲ್ಲಿ ವ್ಯಾಸಂಗವನ್ನು ಮಾಡುತ್ತಿರುವ ಎಸ್.ಸಿ, ಎಸ್‌ಟಿ, ಪ್ರವರ್ಗ–01 ರಂತೆ 8050 ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ನೀಡಬಹುದಾಗಿದ್ದು, ಸರ್ಕಾರದಿಂದ ವಿದ್ಯಾರ್ಥಿಗಳಿಗೆ ನೀಡುವ ಪ್ರೋತ್ಸಾಹಧನ ಅನುದಾನದಲ್ಲಿ ಇದನ್ನು ಭರಿಸಬಹುದಾಗಿದೆ. ಸದರಿ ವಿಷಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:** **ಎಸ್ ಸಿ, ಎಸ್ ಟಿ, ಪ್ರ ವರ್ಗ–1 ರ ಅಭ್ಯರ್ಥಿಗಳಿಗೆ ಉಚಿತವಾಗಿ ನೂತನ ಪಠ್ಯ ಪುಸ್ತಕಗಳನ್ನು ಸರಕಾರ ನೀಡುವ ಪ್ರೋತ್ಸಾಹಧನದ ಅನುದಾನದಲ್ಲಿ ಭರಿಸಲು ಸಭೆಯು ಅನುಮೋದಿಸಿದೆ.**

**ವಿಷಯ 27:** **ಪಾಠಶಾಲೆಗಳಲ್ಲಿ ಖಾಲಿ ಇರುವ ಬ್ಯಾಕ್ ಲಾಗ್ ಹುದ್ದೆ ತುಂಬುವ ಬಗೆಗೆ**

**ಟಿಪ್ಪಣಿ :** ಅನುದಾನಿತ ಪಾಠಶಾಲೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ (ಎಸ್‌ಸಿ, ಎಸ್‌ಟಿ) ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ನಿಯಮಾನುಸಾರ ಆಡಳಿತ ಮಂಡಳಿಯವರು ಕ್ರಮಕೈಗೊಂಡಿರುತ್ತಾರೆ. ನಿಯಮಾನುಸಾರ ನಡೆದ ನೇಮಕಾತಿಯ ಶಾಲಾವಾರು ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ಸಭೆಯ ಅವಗಾಹನೆಗೆ ಸಲ್ಲಿಸಿದೆ.ಸದರಿ ಖಾಲಿ ಹುದ್ದೆಗಳು ನಿಧನ ರಾಜೀನಾಮೆ,ಬಡ್ತಿ ವರ್ಗಾವಣೆಯಿಂದ ತೆರವಾದ ಹುದ್ದೆಗಳಾಗಿದ್ದು, ಹೆಚ್ಚುವರಿ ಅನುದಾನದ ಅವಶ್ಯಕತೆ ಇರುವುದಿಲ್ಲ. ಪಾಠಶಾಲೆಗಳಿಗಾಗಿ ಬಿಡುಗಡೆಯಾಗಿರುವ ಅನುದಾನದಿಂದಲೇ ಭರಿಸಬಹುದಾಗಿರುತ್ತದೆ, ಆದ್ದರಿಂದ ಈ ಹುದ್ದೆಗಳನ್ನು ನಿರ್ದೇಶನಾಲಯದ ಹಂತದಲ್ಲೇ ಭರ್ತಿಮಾಡಿಕೊಳ್ಳುವ ವಿಷಯದ ಬಗೆಗೆ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. **(ಅನುಬಂಧ – 11)**

**ನಿರ್ಣಯ:** **ಅನುದಾನಿತ ಪಾಠಶಾಲೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ (ಎಸ್‌ಸಿ, ಎಸ್‌ಟಿ) ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಸಭೆಯು ಅನುಮೋದಿಸಿತು. ಈ ಕೆಳಕಂಡ ಅಭ್ಯರ್ಥಿಗಳ ನೇಮಕಾತಿಯನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.**

| ಕ್ರ ಸಂ | ಪಾಠಶಾಲೆಯ ಹೆಸರು ಮತ್ತು ವಿಳಾಸ | ಅಭ್ಯರ್ಥಿಯ ಹೆಸರು | ವಿದ್ಯಾರ್ಹತೆ | ಜಾತಿ | ಸೇವೆಗೆ ಹಾಜರಾದ ದಿನಾಂಕ |
|---|---|---|---|---|---|
| 1 | ಶ್ರೀ ಸಿದ್ಧಲಿಗೇಶ್ವರ ಸಂಸ್ಕೃತ ಪಾಠಶಾಲೆ, ಶಿವಬಸವನಗರ, ಬೆಳಗಾವಿ | ದೇವು ದೀಪಲು ಜಾಧವ | ಬಿ.ಎ. ಸಂಸ್ಕೃತ | ಎಸ್.ಸಿ | 05.09.2013 |
| 2 | ಶ್ರೀ ನಾಗಲಿಂಗಸ್ವಾಮಿ ಸಂಸ್ಕೃತ ಪಾಠಶಾಲೆ, ಆಲಂಗಾರು, ಮೂಡಬಿದರೆ ತಾ॥, ದ.ಕ. ಜಿಲ್ಲೆ | ವಿಜಯಕುಮಾರ ಹೆಚ್. | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, ವಿದ್ವನ್ಮಧ್ಯಮಾ | ಎಸ್.ಸಿ | 12.09.2013 |
| 3 | ಶ್ರೀ ಸುಬ್ರಹ್ಮಣ್ಯೇಶ್ವರ ಸಂಸ್ಕೃತ ಪಾಠಶಾಲೆ, ಕಳಸ, ಮೂಡುಗೆರೆ ತಾ॥. ಚಿಕ್ಕಮಗಳೂರು ಜಿಲ್ಲೆ. | ಸತೀಶ ವಿ. | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, ವಿದ್ವನ್ಮಧ್ಯಮಾ | ಎಸ್.ಸಿ | 27.09.2013 |
| 4 | ಶ್ರೀ ಮಹಾಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಬಹುಳಾಪುರ, ಮಕ್ಕಿ ದೇವಸ್ಥಾನ, ಕುಂದಾಪುರ ತಾ॥ | ಮಹಾಲಕ್ಷ್ಮೀ ಡಿ. | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, ಡಿ.ಇಡಿ | ಎಸ್.ಸಿ | 22.08.2013 |
| 5 | ಶ್ರೀ ತೋಂಟದಾರ್ಯ ಸಂಸ್ಕೃತ ಪಾಠಶಾಲೆ, ಕುದೇರುಮಠ, ಬಸವೇಶ್ವರನಗರ, ಮೈಸೂರು. | ನಂಜುಂಡ ಬಿ. | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, ಡಿ.ಇಡಿ | ಎಸ್.ಸಿ | 28.10.2013 |
| 6 | ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ಪಾಠಶಾಲೆ, ಲಕ್ಷ್ಮೇಶ್ವರ, ಶಿರಹಟ್ಟಿ ತಾ॥, ಗದಗ ಜಿಲ್ಲೆ. | ಹನುಮಂತಪ್ಪ ನಿಂಗಪ್ಪ ಭಜಂತ್ರಿ | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, ವಿದ್ವನ್ಮಧ್ಯಮಾ | ಎಸ್.ಸಿ | 07.10.2013 |
| 7 | ಶ್ರೀ ಕಾಂತ ಸಂಸ್ಕೃತ ಪಾಠಶಾಲೆ, ಶಂಕರಮಠ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು. | ಲಕ್ಷ್ಮೀನಾರಾಯಣಸ್ವಾಮಿ ಎನ್. | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, ವಿದ್ವನ್ಮಧ್ಯಮಾ | ಎಸ್.ಸಿ | 22.08.2013 |
| 8 | ಶ್ರೀ ವಾಣೀವಿನಾಯಕ ಸಂಸ್ಕೃತ ಪಾಠಶಾಲೆ, ಹೆಗ್ಗರಣೆ, ಸಿದ್ದಾಪುರ ತಾ॥, ಉ.ಕ.ಜಿಲ್ಲೆ. | ವೆಂಕಟೇಶ | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, ವಿದ್ವನ್ಮಧ್ಯಮಾ | ಎಸ್.ಸಿ | 29.08.2013 |
| 9 | ಶ್ರೀ ಸಿದ್ಧಾರ್ಥ ಸಂಸ್ಕೃತ ಪಾಠಶಾಲೆ, ಮಳವಳ್ಳಿ, ಮಂಡ್ಯ ಜಿಲ್ಲೆ. | ಸಂತೋಷ್ ಕುಮಾರ್ ಆರ್. | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, | ಎಸ್.ಸಿ | 06.11.2013 |
| 10 | ಸಂಸ್ಕೃತ ವೇದ ಪಾಠಶಾಲಾ, ಶ್ರೀ ಚಿದಂಬರಾಶ್ರಮ, ಗುಬ್ಬಿ | ಶ್ರೀಮತಿ ವಿ.ಸಿ. ನೇತ್ರಾವತಿ | ಎಸ್.ಎಸ್.ಎಲ್.ಸಿ., ಸಂಸ್ಕೃತ ಸಾಹಿತ್ಯ, ವಿದ್ವನ್ಮಧ್ಯಮಾ | ಎಸ್.ಸಿ | 29.09.2014 |

**ವಿಷಯ 28:** **ಪಾಠಶಾಲೆಗಳಲ್ಲಿ ನಿಧನ, ರಾಜೀನಾಮೆ, ಬಡ್ತಿ ವರ್ಗಾವಣೆಯಿಂದ ತೆರವಾದ ಹುದ್ದೆಗಳನ್ನು ತುಂಬುವ ಬಗೆಗೆ**

ಟಿಪ್ಪಣಿ : ಖಾಸಗಿ ಅನುದಾನಿತ ಸಂಸ್ಕೃತ ಪಾಠಶಾಲೆಗಳಲ್ಲಿ ನಿವೃತ್ತಿ, ಮರಣ, ವರ್ಗಾವಣೆ, ರಾಜೀನಾಮೆ ಮತ್ತು ನಿಯಾಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿ ಮತ್ತು ವರ್ಗಾವಣೆಯಿಂದ ತೆರವಾದ ಬೋಧಕ ಹುದ್ದೆಗಳನ್ನು ತುಂಬಲು ಸರ್ಕಾರವು ಸಾಮಾನ್ಯ ಶಾಲೆಗಳಿಗೆ ಭರ್ತಿ ಮಾಡಲು ಅನುಮತಿ ನೀಡಿರುತ್ತದೆ. ಅದರಂತೆ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳನ್ನು ಕೆಳಕಂಡ ಕಾರಣಗಳಿಗಾಗಿ ಭರ್ತಿ ಮಾಡುವುದು ಅಗತ್ಯವಾಗಿರುತ್ತದೆ.

1. ಹೆಚ್ಚು ಸಂಸ್ಕೃತ ಪಾಠಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿದ್ದು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ನಿವೃತ್ತರಾದ **ತಕ್ಷಣ ಹುದ್ದೆಗಳನ್ನು ತುಂಬದಿದ್ದರೆ ಶಾಲೆಗಳನ್ನು ಮುಚ್ಚಬೇಕಾಗುತ್ತದೆ.**

2. ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿಯಾದ ಹುದ್ದೆಗಳನ್ನು ಸರಿಯಾದ ಸಮಯದಲ್ಲಿ ತುಂಬದಿದ್ದರೆ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

3. ಸಂಸ್ಕೃತ ಪಾಠಶಾಲೆಗಳಲ್ಲಿ **ಖಾಲಿ ಇರುವ ಹುದ್ದೆಗಳು ಅನುದಾನಿತ ಹುದ್ದೆಗಳಾದ್ದರಿಂದ ಹೆಚ್ಚುವರಿ ಅನುದಾನ ಅವಶ್ಯಕವಾಗಿರುವುದಿಲ್ಲ. ಪ್ರಸ್ತುತ ಲಭ್ಯವಿರುವ ಅನುದಾನದಲ್ಲಿಯೇ ಭರಿಸಬಹುದಾಗಿದೆ.**

4. ಪ್ರಸ್ತುತ ಖಾಲಿ ಇರುವ ಹುದ್ದೆಗಳು ಆರ್ಥಿಕ ಇಲಾಖೆಯ ಸಹಮತಿಯನ್ವಯ ಅನುಮೋದಿತ ಹುದ್ದೆಗಳಾಗಿದ್ದು, **ಆರ್ಥಿಕ ಇಲಾಖೆಯಿಂದ ಅನುಮತಿ ಪಡೆಯುವುದು ಅಗತ್ಯ ಇರುವುದಿಲ್ಲ.**

5. ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಹಾಗೂ ಅದರಂತೆ ಆದ ನೇಮಕಾತಿಗಳನ್ನು ಅನುದಾನ ಸಹಿತ ಅನುಮೋದಿಸುವ ಸಕ್ಷಮ ಪ್ರಾಧಿಕಾರ ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸಂಬಂಧಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಆಗಿರುತ್ತಾರೆ.

ಸಂಸ್ಕೃತ ಪಾಠಶಾಲೆಗಳ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಹಾಗೂ ನೇಮಕಾತಿಗಳನ್ನು ಅನುಮೋದಿಸುವ ಸಕ್ಷಮ ಪ್ರಾಧಿಕಾರ ಕುಲಪತಿಗಳು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರಾಗಿರುತ್ತಾರೆ.

6. ಈ ಹುದ್ದೆಗಳನ್ನು ಚಾಲ್ತಿಯಲ್ಲಿರುವ ಮೀಸಲಾತಿ ಹಾಗೂ ನಿಗದಿತ ಸಿಬ್ಬಂದಿ ಮಾದರಿ ನಿಯಮಗಳನ್ವಯ ಭರ್ತಿ ಮಾಡಬಹುದಾಗಿದೆ.

7. ಸಾಮಾನ್ಯ ಶಾಲೆಗಳಿಗೆ ಸಂಬಂಧಿಸಿದಂತೆ ಸರ್ಕಾರವು ಆದೇಶ ಸಂಖ್ಯೆ:ಇಡಿ15ಎಸ್‌ಇಪಿ2011, ಬೆಂಗಳೂರು ಮತ್ತು ದಿನಾಂಕ:16.07.2014ರಲ್ಲಿ ದಿನಾಂಕ:31.12.2012 ಪೂರ್ವದಲ್ಲಿ ಖಾಲಿಯಾದ ಬೋಧಕ ಹುದ್ದೆಗಳನ್ನು ತುಂಬಲು ಆದೇಶ ನೀಡಿರುತ್ತದೆ. ಈ ಆದೇಶದಂತೆ ಸಂಸ್ಕೃತ ಪಾಠಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅನುಮತಿ ನೀಡಬಹುದಾಗಿರುತ್ತದೆ.

8. ಸಾಮಾನ್ಯ ಶಾಲೆಗಳಲ್ಲಿ ಉಂಟಾಗುವ ಹೆಚ್ಚುವರಿ ಶಿಕ್ಷಕರುಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವುದಕ್ಕಾಗಿ ಕಾಲ ಕಾಲಕ್ಕೆ ಹುದ್ದೆಗಳನ್ನು ತುಂಬಲು ನಿರ್ಭಂಧ ವಿಧಿಸಿರುತ್ತದೆ, ಆದರೆ ಸಂಸ್ಕೃತ ಪಾಠಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲವಾದ್ದರಿಂದ ದಿನಾಂಕ: 30.09.2014ರ ವರೆಗೆ ಖಾಲಿಯಾಗಿರುವ ಹುದ್ದೆಗಳನ್ನು ತಕ್ಷಣದಲ್ಲಿಯೇ ಭರ್ತಿ ಮಾಡುವ ಬಗ್ಗೆ ಕ್ರಮ ವಹಿಸಬಹುದಾಗಿದೆ.

9. ಒಟ್ಟು 52 ಶಾಲೆಗಳಲ್ಲಿ 68 ಶಿಕ್ಷಕ ಹುದ್ದೆಗಳು ಖಾಲಿ ಇದ್ದು ವಾರ್ಷಿಕ 12644600/–(ಒಂದುಕೋಟಿ ಇಪ್ಪತ್ತುಆರು ಲಕ್ಷದ ನಲವತ್ತಾನಾಲ್ಕು ಸಾವಿರ ಆರುನೂರ ಮಾತ್ರ) ರೂಗಳ ಅನುದಾನ ಬೇಕಾಗುತ್ತದೆ.

ಸದರಿ ವಿಷಯವನ್ನು ಸಭೆಯು ಚರ್ಚಿಸಿ ಅನುಮೋದಿಸಲು ಮಂಡಿಸಿದೆ.**(ಅನುಬಂಧ – 12)**

ನಿರ್ಣಯ: **ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಷಿಕ 12644600/– (ಒಂದು ಕೋಟಿ ಇಪ್ಪತ್ತುಆರು ಲಕ್ಷದ ನಲವತ್ತಾನಾಲ್ಕು ಸಾವಿರ ಆರುನೂರ ಮಾತ್ರ) ರೂಗಳ ಆರ್ಥಿಕ ಹೊರೆಯು ಸರ್ಕಾರದ ಮೇಲೆ ಬೀಳುವುದರಿಂದ, 2012ರ ಮುಂಚಿನ ಖಾಲಿ ಹುದ್ದೆಗಳಿಗೆ ಭರ್ತಿ ಮಾಡಲು ಸರಕಾರ ಒಪ್ಪಿಗೆ ನೀಡುವ ಕಾರಣ ಸರ್ಕಾರದ ಅನುಮತಿಯನ್ನು ಪಡೆದು ಮುಂದುವರೆಯಬಹುದೆಂದು ಸಭೆಯು ಸೂಚಿಸಿತು. ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಈ ವಿಷಯದಲ್ಲಿ ತ್ವರಿತವಾಗಿ ಪತ್ರವ್ಯವಹಾರ ಮಾಡಬೇಕೆಂದು ಸೂಚಿಸಿತು.**

**ವಿಷಯ 29 :** **ವಲಯ ಸಂಯೋಜಕರ/ವಿಷಯ ಪರಿವೀಕ್ಷಕರ ವಿಶೇಷ ಗಳಿಕೆ ರಜೆ ನೀಡುವ ಬಗೆಗೆ.**

ಟಿಪ್ಪಣಿ : ಮಾನ್ಯ ಕುಲಪತಿಗಳ ಆದೇಶದಂತೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ವಲಯ ಸಂಯೋಜಕರು/ ವಿಷಯ ಪರಿವೀಕ್ಷಕರು ಬಿಡುವಿನ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದ ರಿಂದ ಕೆ ಸಿ ಎಸ್ ಆರ್

ನಿಯಮಾನುಸಾರ ಗಳಿಕೆ ರಜೆಯನ್ನು ಮಂಜೂರು ಮಾಡಲು ಅವಕಾಶ ಇರುವುದರಿಂದ ಇವರುಗಳ ಖಾತೆಗೆ ಗಳಿಕೆ ರಜೆಯನ್ನು ನೀಡಲು ಬಾಕಿ ಇರುವ ಗಳಿಕೆ ರಜೆಯನ್ನು ಪಟ್ಟಿಮಾಡಿ ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಗಳಿಕೆ ರಜೆಯನ್ನು ಅನುಮೋದಿಸುವ ಬಗೆಗೆ ಸರ್ಕಾರದ ನಿಯಮಾನುಸಾರ ಕ್ರಮವಹಿಸಬಹುದೆಂದು ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ 30:** **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ವಾಹನ ಚಾಲಕರ ನೇಮಕಾತಿ ಬಗೆಗೆ,**

ಟಿಪ್ಪಣಿ : ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರ ವಾಹನ ಚಾಲಕರ ನೇಮಕಾತಿ ಸಂಬಂಧ ಹೊರಗುತ್ತಿಗೆ ವಾಹನ ಚಾಲಕರ ಜಾಹೀರಾತಿಗೆ ಒಟ್ಟೂ ಮೂರು ಎಂಟರ್ ಪ್ರೈಸಸ್‌ಗಳಿಂದ ದರಪಟ್ಟಿ ಬಂದಿದ್ದು, ಇದರಲ್ಲಿ ಮಾನಸ ಎಂಟರ್‌ಪ್ರೈಸಸ್‌ರವರು ಕಡಿಮೆ ದರವನ್ನು ನಮೂದಿಸಿದ್ದರಿಂದ ಅವರಿಗೆ ಒಂದು ವರ್ಷದ ಅವಧಿಗೆ ವಾಹನ ಚಾಲಕರನ್ನು ಒದಗಿಸಲು ಆದೇಶ ನೀಡುವ ಕುರಿತು ಪ್ರಶಾಸನ ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. **(ಅನುಬಂಧ – 13)**

ನಿರ್ಣಯ: **ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ನೀಡಿರುವ ಹೊರಗುತ್ತಿಗೆ ನೌಕರರ ವೇತನ ಪಟ್ಟಿ ಹಾಗೂ ಹೊರಗುತ್ತಿಗೆ ಸಂಸ್ಥೆಯವರು ನೀಡಿರುವ ಪಟ್ಟಿಗಳನ್ನು ಪರಿಶೀಲಿಸಿ ಕಡಿಮೆ ದರ ನೀಡಿರುವ ಮಾನಸ ಎಂಟರ್ ಪ್ರೈಸಸ್ ಸಂಸ್ಥೆಗೆ ಆದೇಶ ನೀಡಿ ವಾಹನ ಚಾಲಕರ ನೇಮಕಾತಿಯನ್ನು ಹೊರಗುತ್ತಿಗೆ ನಿಯಮಾನುಸಾರ ಮಾಡಬಹುದೆಂದು ಸಭೆಯು ಅನುಮೋದಿಸಿತು.**

**ವಿಷಯ 31:** **ಕ.ಸಂ.ವಿಶ್ವವಿದ್ಯಾಲಯದ ಸಿಬ್ಬಂದಿ ಶ್ರೀ ಹೆಚ್. ಶಿವಕುಮಾರ್, ಶ್ರೀ ಕೆ. ಬಿ. ದಿವಾಕರ್, ಕುಮಾರಿ ಎಂ. ಮಂಗಳಾ, ಇವರ ಖಾಯಂಪೂರ್ವ ಸೇವಾವಧಿಯನ್ನು ಘೋಷಿಸುವ ಬಗೆಗೆ**

ಟಿಪ್ಪಣಿ : ಕ.ಸಂ.ವಿಶ್ವವಿದ್ಯಾಲಯದ ಸಿಬ್ಬಂದಿಯಾದ ಶ್ರೀ ಹೆಚ್. ಶಿವಕುಮಾರ್, ವಾಹನ ಚಾಲಕರು, ಶ್ರೀ ಕೆ. ಬಿ. ದಿವಾಕರ್, ವಾಹನ ಚಾಲಕರು, ಕುಮಾರಿ ಎಂ. ಮಂಗಳಾ, ಅಡುಗೆ ಸಹಾಯಕರು – ಇವರು ವಿಶ್ವವಿದ್ಯಾಲಯದಲ್ಲಿ 2 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು, ದಿನಾಂಕ 26.09.2014ರಂದು ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುತ್ತಾರೆ. ಈ 2 ವರ್ಷಗಳ ಅವಧಿಯಲ್ಲಿ ಅವರ ಮೇಲೆ ಯಾವುದೇ ನಾಗರಿಕ ಅಥವಾ ಕ್ರಿಮಿನಲ್ ಮೊಕದ್ದಮೆಯು ಕ.ಸಂ.ವಿ ಗಮನಕ್ಕೆ ಬಂದಿಲ್ಲ. ಇವರು ಖಾಯಂ ಸೇವೆಗೆ ಸೇರುವ ಮೊದಲು ಪೋಲೀಸ್ ತಪಶೀಲು ಆಗಿಲ್ಲ. ಅದನ್ನು ಆದಷ್ಟು ಶೀಘ್ರವೇ ಕೈಗೊಂಡು, ವರದಿ ತರಿಸಿಕೊಂಡು ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಕಸಂವಿ ನೌಕರರ ಪೋಲೀಸ್ ತಪಾಸಣೆಯ ವರದಿ ಕೈಸೇರಿದ ಮೇಲೆ ಅವರ ಖಾಯಂಪೂರ್ವ ಸೇವಾವಧಿ ಮುಗಿದ ದಿನಾಂಕದಿಂದ ಅನ್ವಯಿಸುವಂತೆ ಖಾಯಂ ಪೂರ್ವ ಸೇವಾ ಅವಧಿಯನ್ನು ಘೋಷಿಸಲು ಸಭೆಯು ಅನುಮೋದಿಸಿತು.**

**ವಿಷಯ 32:** **ಸಿದ್ಧಗಂಗಾ ಸಂಸ್ಕೃತ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀ ರೇಣುಕಾರಾಧ್ಯ, ಇವರ ವೇತನ ಸಹಿತ ರಜೆಯನ್ನು ಮಂಜೂರುಗೊಳಿಸುವ ಬಗೆಗೆ**

ಟಿಪ್ಪಣಿ : ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀ ರೇಣುಕಾರಾಧ್ಯ, ಇವರಿಗೆ ಪಿಎಚ್.ಡಿ. ವ್ಯಾಸಂಗಕ್ಕಾಗಿ ಈ ಹಿಂದೆ ವೇತನ ಸಹಿತ ರಜೆಯನ್ನು ಮಂಜೂರು ಮಾಡಲಾಗಿತ್ತು. ರಜೆಯ ಕಾಲಾವಧಿಯನ್ನು ನವೆಂಬರ್ 2013ರಿಂದ ನವೆಂಬರ್ 2014ರವರೆಗೆ ವಿಸ್ತರಿಸಿತ್ತು. ಆದರೆ, ಅವರಿಗೆ ಅನುಮೋದನ ಪತ್ರವನ್ನು ನೀಡಿರುವುದಿಲ್ಲ. ಈ ಸಂಬಂಧ, ಅನುಮೋದನ ಪತ್ರವನ್ನು ಆ ಅವಧಿಗೆ ಮಾತ್ರ ನೀಡಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಶ್ರೀ ರೇಣುಕಾರಾಧ್ಯ, ಇವರಿಗೆ ಪಿಎಚ್.ಡಿ. ವ್ಯಾಸಂಗಕ್ಕಾಗಿ ರಜೆಯ ಕಾಲಾವಧಿಯನ್ನು ನವೆಂಬರ್ 2013ರಿಂದ ನವೆಂಬರ್ 2014ರವರೆಗೆ ವಿಸ್ತರಿಸಿದ್ದು, ಅನುಮೋದನೆ ಪತ್ರವನ್ನು ನೀಡಿರಲಿಲ್ಲ. ಈಗ ಅವರ ಪಿಎಚ್.ಡಿ. ಪ್ರಬಂಧ ಸಮರ್ಪಣೆಯ ಅವಧಿಯವರೆಗೆ ವೇತನ ಸಹಿತ ರಜೆಯನ್ನು ವಿಸ್ತರಿಸಲು ಸಭೆಯು ಅನುಮೋದಿಸಿತು.**

**ವಿಷಯ 33 : ಶಾಸ್ತ್ರ/ವೇದ ವಿದ್ವದುತ್ತಮಾ ಪರೀಕ್ಷೆಗಳನ್ನು ಆಯಾಯಾ ಕಾಲೇಜುಗಳಲ್ಲಿಯೇ ನಡೆಸುವ ಬಗೆಗೆ**

ಟಿಪ್ಪಣಿ : ಶಾಸ್ತ್ರ/ವೇದ ವಿದ್ವದುತ್ತಮಾ ಪರೀಕ್ಷೆಗಳನ್ನು ಇಲ್ಲಿಯವರೆಗೂ ಅನೇಕ ಕೇಂದ್ರಗಳಲ್ಲಿ ನಡೆಸಲಾಗುತ್ತಿತ್ತು. ಇತ್ತೀಚೆಗೆ ನಡೆದ ಪ್ರಶಿಕ್ಷಣ ಪರಿಷತ್ತಿನ ಸಭೆಯಲ್ಲಿ ಶಾಸ್ತ್ರ/ವೇದ ವಿದ್ವದುತ್ತಮಾ ಪರೀಕ್ಷೆಗಳನ್ನು ಕೇವಲ 3 ಕೇಂದ್ರಗಳಲ್ಲಿ ನಡೆಸಲು ತೀರ್ಮಾನಿಸಲಾಯಿತು. ಇದಕ್ಕೆ ಅಖಿಲ ಕರ್ನಾಟಕ ಕಾಲೇಜು ಪ್ರಾಚಾರ್ಯರ ಸಂಘದ ಅಧ್ಯಕ್ಷರಿಂದ ಪ್ರತಿರೋಧ ವ್ಯಕ್ತವಾಗಿದೆ. ಕಾರಣ, ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿರುವ ಆದಿಚುಂಚನಗಿರಿ ಹಾಗೂ ಸಿದ್ಧಗಂಗಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ ವಸತಿಯನ್ನು ನೀಡಿ ಬೋಧಿಸುತ್ತಿದ್ದಾರೆ. ಎಲ್ಲ ವರ್ಗಗಳಿಗೂ ಸೇರಿದ ಬಹಳಷ್ಟು ಬಡ ವಿದ್ಯಾರ್ಥಿಗಳಿದ್ದು, ಅವರಿಗೆ ನೂತನ ತೀರ್ಮಾನದಿಂದ ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ: ಮೇಲ್ಕಂಡ ಅಂಶವನ್ನು ಪುನಃ ಪರಿಷತ್ತಿನಲ್ಲಿ ಇಟ್ಟು ಚರ್ಚಿಸಿ ನಿರ್ಣಯಿಸಲು ಸಭೆಯು ಸೂಚಿಸಿತು.**

**ಇತರ ವಿಷಯಗಳನ್ನು ಚರ್ಚಿಸುತ್ತಾ ಭವಿಷ್ಯದಲ್ಲಿ ಪ್ರಶಾಸನ ಸಮಿತಿಗೆ ಸಂಬಂಧಿಸಿದ ಕಾರ್ಯಸೂಚಿ ಹಾಗೂ ವಿವರಗಳನ್ನು ನಿರ್ದಿಷ್ಟ ದಿನಗಳು ಮೊದಲೇ ಕಳುಹಿಸಬೇಕು ಹಾಗೂ 45 ದಿನಗಳಿಗೊಮ್ಮೆ ಪ್ರಶಾಸನ ಸಮಿತಿಯ ಸಭೆಯನ್ನು ನಡೆಸಬಹುದೆಂದು ಸಭೆಯ ಸದಸ್ಯರು ತಿಳಿಸಿದರು. ಹಾಗೆಯೇ ಕಸಂವಿಯ ವಿಧೇಯಕವನ್ನು ಇಂದಿನ ಶೈಕ್ಷಣಿಕ ಪರಿಸ್ಥಿತಿಗೆ ಅನುಗುಣವಾಗಿ ಪರಿಶೀಲಿಸಬಹುದು ಮತ್ತು ಇದಕ್ಕಾಗಿ ಒಂದು ಸಮಿತಿ ರಚನೆಯಾಗಬೇಕಾಗಿದೆ ಎಂಬ ಅಂಶವನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಸಭೆಯು ಸೂಚಿಸಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು :**

**ವಿಷಯ 01 : ಮಾನಸೋಲ್ಲಾಸ ಅನುವಾದ ಗ್ರಂಥವನ್ನು ಪ್ರಸಾರಾಂಗದ ಮೂಲಕ ಪ್ರಕಟಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸರ್ಕಾರವು 2012ರಲ್ಲಿ "ಮಾನಸೋಲ್ಲಾಸ" ಗ್ರಂಥ ಪ್ರಕಟಣ ಯೋಜನೆಗೆ 10.00 ಲಕ್ಷ ರೂಗಳ ಅನುದಾನವನ್ನು ನೀಡಿತ್ತು. ಆ ಹಣವನ್ನು ಹಣಕಾಸು ಅಧಿಕಾರಿಗಳ ಬ್ಯಾಂಕ್ ಖಾತೆಯಲ್ಲಿ ಇರಿಸಲಾಗಿದೆ. ಪ್ರಶಾಸನ ಸಮಿತಿಯ ಸೂಚನೆಯಂತೆ ವಿಶ್ರಾಂತ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಸಂಪಾದಕತ್ವದಲ್ಲಿ ನಾಲ್ಕು ಸಂಪುಟಗಳ ಮಾನಸೋಲ್ಲಾಸ ಬೃಹತ್ ಸಂಪುಟಗಳು ಸಿದ್ಧಗೊಳ್ಳುತ್ತಿವೆ. ಸುಮಾರು 2500 ಪುಟಗಳ ನಾಲ್ಕು ಸಂಪುಟಗಳ ಅನುವಾದಕರಾಗಿ – ಡಾ. ಎಚ್.ವಿ. ನಾಗರಾಜರಾವ್, ಡಾ. ಟಿ. ಎಸ್. ಸತ್ಯವತಿ, ಡಾ. ಆರ್. ಗಣೇಶ್, ಪ್ರೊ. ಚೂಡಾಮಣಿ ನಂದಗೋಪಾಲ್, ಪ್ರೊ. ಶ್ರೀರಾಮ ಭಟ್ಟ,ಪ್ರೊ. ಬಿ.ಜಿ.ಶ್ರೀಲಕ್ಷ್ಮಿ, ಡಾ. ಶಾಂತಾ ಶೈವಲಿನೀ, ಪ್ರೊ. ನಾರಾಯಣ ಘಟ್ಟ, ಡಾ. ಆರ್. ಶಂಕರ್, ವಿದ್ವಾನ್ ಗುರುಪ್ರಸಾದ್, ಡಾ. ಎನ್.ಎಚ್. ರಾಮಚಂದ್ರ, ಡಾ. ಶೇಷ ನವರತ್ನ, ಡಾ. ಟಿ.ವಿ ಸತ್ಯನಾರಾಯಣ, ಡಾ. ಎಂ.ಎನ್. ಜೋಶಿ, ಡಾ. ಎಂ.ವಿ. ವಿಶ್ವನಾಥ್, ಡಾ. ಪ್ರಾಣೇಶ್, ಡಾ. ಎಚ್. ಎಸ್. ಪಾಠಕ್ – ಇವರು ಸಹಕರಿಸಿದ್ದಾರೆ. ಒಟ್ಟು 8,000 ಶ್ಲೋಕಗಳಿರುವ ಈ ಗ್ರಂಥದ ಅನುವಾದಕರಿಗೆ ಶ್ಲೋಕವೊಂದಕ್ಕೆ ರೂ. 20/–ರಂತೆ ಅನುವಾದ ಸಂಭಾವನೆಯನ್ನು ಪಾವತಿಸಬಹುದಾಗಿದೆ. ಅದರಂತೆ ವಿಶ್ವವಿದ್ಯಾಲಯವು ರೂ. 1.60 ಲಕ್ಷ ಪಾವತಿಸಬೇಕಾಗುತ್ತದೆ. ಹಾಗೂ ಸಂಪಾದಕರ ಗೌರವಧನ ಒಂದು ಸಂಪುಟಕ್ಕೆ 25,000/–ದಂತೆ ನಾಲ್ಕು ಸಂಪುಟಗಳಿಗೆ ರೂ. 1.00 ಲಕ್ಷ ಪಾವತಿಸಬೇಕಿದೆ. ಹಾಗೂ ಡಿ.ಟಿ.ಪಿ. ವೆಚ್ಚವನ್ನು ವಿಶ್ವವಿದ್ಯಾಲಯವು ವಹಿಸಿಕೊಂಡಿರುವ ಕಾರಣ ಸುಮಾರು 50,000/– ರೂಗಳನ್ನು ಪಾವತಿಸಬೇಕಿದೆ. ಈ ಬೃಹತ್ ಸಂಪುಟಗಳ ಪ್ರಕಟಣ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಕ್ರಮವಹಿಸಬೇಕಿದೆ. ವಿಶ್ವವಿದ್ಯಾಲಯವು ಸದ್ಯ ಅವುಗಳನ್ನು ಪ್ರಸಾರಾಂಗದ ಮೂಲಕ ಪ್ರಕಟಿಸಲು ಭೌತಿಕ ಸಂಪನ್ಮೂಲಗಳ ಕೊರತೆ ಇದೆ. ಆದುದರಿಂದ, ಪ್ರಸಿದ್ಧ ಪ್ರಕಾಶಕರಾದ ದರೇಸಾ ಪ್ರಕಾಶನದವರು ಈ ಸಂಪುಟಗಳನ್ನು ಪ್ರಕಟಿಸಲು ತಾತ್ವಿಕವಾಗಿ ಒಪ್ಪಿರುತ್ತಾರೆ. ಅವರಿಗೆ ಮುದ್ರಿಸಿ ಪ್ರಕಟಿಸಲು ಅನುಮೋದನೆ ನೀಡಬಹುದಾಗಿದೆ. ಅವರು ಒಟ್ಟು 1000 ಪ್ರತಿಗಳನ್ನು ಮುದ್ರಿಸಿ 100 ಗೌರವ ಪ್ರತಿಗಳನ್ನು ವಿಶ್ವವಿದ್ಯಾಲಯಕ್ಕೆ ಮತ್ತು ಅನುವಾದಕರಿಗೆ ಒಂದೊಂದು ಗೌರವ ಪ್ರತಿ ಹಾಗೂ ಸಂಪಾದಕರಿಗೆ 21 ಸೆಟ್ಟುಗಳ ಗೌರವ ಪ್ರತಿಗಳನ್ನು ನೀಡಬಹುದಾಗಿದೆ. ಅನೇಕ ವಿ.ವಿ.ಗಳು ಇಂತಹ ಮಾರಾಟ ವ್ಯವಸ್ಥೆಯನ್ನು ಹೊಂದಿವೆ. ಈ ಯೋಜನೆಯ ಬಾಕಿ ಉಳಿದ ಮೊತ್ತವನ್ನು ಪ್ರಸಾರಾಂಗದ ಮುಂದಿನ ಗ್ರಂಥಗಳ

ಪ್ರಕಟಣೆಯ ಮೂಲಧನವಾಗಿ ಬಳಸಬಹುದಾಗಿದೆ. ಈ ಅಂಶವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ : **ಸಮಿತಿಯು ಮಂಡಿಸಿದ ಎಲ್ಲ ವಿಷಯಗಳನ್ನು ವಿಸ್ತೃತವಾಗಿ ಚರ್ಚಿಸಿ ಸಮಗ್ರ ಪ್ರಸ್ತಾವನೆಯನ್ನು ಅಂಗೀಕರಿಸಿತು. ದರೇಸಾ ಪ್ರಕಾಶನದೊಂದಿಗೆ ಚರ್ಚಿಸಿ ಸೂಕ್ತವಾದ ಒಪ್ಪಂದವನ್ನು ಮಾಡಿಕೊಳ್ಳುವ ಕಾರ್ಯವನ್ನು ಕುಲಪತಿಗಳಿಗೆ ವಹಿಸಲಾಯಿತು. ಅಲ್ಪಕಾಲದಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಿದ ಸಂಪಾದಕರನ್ನು ಸಭೆಯು ಅಭಿನಂದಿಸಿತು.**

**ವಿಷಯ 02 : ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿರುವ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗೆಗೆ**

ಟಿಪ್ಪಣಿ : ವಿಶ್ವವಿದ್ಯಾಲಯದ ಅನುದಾನಿತ ಸಂಸ್ಕೃತ ಕಾಲೇಜುಗಳಲ್ಲಿ ಮಂಜೂರಾದ ಬೋಧಕ ಮತ್ತು ಬೋಧಕೇತರ ಖಾಲಿ ಇರುವ ಹುದ್ದೆಗಳ ವಿವರ ಕೆಳಕಂಡಂತಿದೆ. ಈ ಹುದ್ದೆಗಳು ಅನುದಾನಿತ ಹುದ್ದೆಗಳಾಗಿದ್ದು, ರಾಜೀನಾಮೆ, ನಿವೃತ್ತಿ, ನಿಧನ ಇತ್ಯಾದಿ ಕಾರಣಗಳಿಂದ ಅನೇಕ ವರ್ಷಗಳಿಂದ ಖಾಲಿ ಇರುವ ಕಾರಣ ಬೋಧನೆಗೆ ತೊಂದರೆಯಾಗುತ್ತದೆಂದು ಅನೇಕ ಬಾರಿ ಪತ್ರಿಸಿರುತ್ತಾರೆ. ಈ ಸಂಬಂಧ ಸರ್ಕಾರಕ್ಕೆ ಒಟ್ಟಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದನೆಗಾಗಿ ಮಂಡಿಸಿದೆ.

| ಕ್ರ ಸಂ | ಕಾಲೇಜುಗಳ ಹೆಸರು ಮತ್ತು ವಿಳಾಸ | ಬೋಧಕ ಹುದ್ದೆಗಳು | ಬೋಧಕೇತರ ಹುದ್ದೆಗಳು | ಒಟ್ಟು |
|---|---|---|---|---|
| 1 | ಶ್ರೀಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು<br>ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು,<br>ಮಂಡ್ಯ ಜಿಲ್ಲೆ–571811 | **02** | **01** | **03** |
| 2 | ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು<br>ಶ್ರೀ ಸಿದ್ಧಗಂಗಾ ಕ್ಷೇತ್ರ, ಕ್ಯಾತ್ಸಂದ್ರ ಪೋಸ್ಟ್,<br>ತುಮಕೂರು ಜಿಲ್ಲೆ – 572 104 | **06** | **03** | **09** |
| 3 | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು,<br>ಪೂರ್ಣಪ್ರಜ್ಞ ನಗರ,<br>ಕತ್ತರಿಗುಪ್ಪೆ ಮುಖ್ಯರಸ್ತೆ,<br>ಬೆಂಗಳೂರು – 560 028 | **09** | **02** | **11** |
| 4 | ಸಿ.ಎಲ್.ವೈ. ಸಂಸ್ಕೃತ ಕಾಲೇಜು<br>ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ<br>ಧಾರವಾಡ – 580 008 | **02** | **–** | **02** |
| 5 | ಶ್ರೀಮಾತಾ ಸಂಸ್ಕೃತ ಕಾಲೇಜು<br>ಉಮ್ಮಚಗಿ,<br>ಯಲ್ಲಾಪುರ ತಾಲ್ಲೂಕು–581347<br>ಉತ್ತರ ಕನ್ನಡ ಜಿಲ್ಲೆ | **03** | **–** | **03** |
| 6 | ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು ಸುಬ್ರಹ್ಮಣ್ಯ,<br>ಸುರಕಟ್ಟೆ ಅಂಚೆ,<br>ಹೊನ್ನಾವರ ತಾಲ್ಲೂಕು – 581 334, ಉ.ಕ | **05** | **01** | **06** |
| 7 | ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು<br>ಉಡುಪಿ – 576 101 | **05** | **03** | **08** |
| 8 | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು<br>ಜಮಖಂಡಿ – 587 301<br>ಜಮಖಂಡಿ ತಾಲ್ಲೂಕು,<br>ಬಾಗಲಕೋಟೆ ಜಿಲ್ಲೆ | **02** | **–** | **02** |
| 9 | ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದ ಭವನ ಸಂಸ್ಕೃತ ಮಹಾ ವಿದ್ಯಾಲಯ, ಗೋಕರ್ಣ,<br>ಕುಮಟ ತಾಲ್ಲೂಕು,<br>ಉತ್ತರ ಕನ್ನಡ ಜಿಲ್ಲೆ | **15** | **–** | **15** |
| | | **49** | **10** | **59** |

| | | ಅಂದಾಜು ಒಟ್ಟು ವಾರ್ಷಿಕ ಅನುದಾನ |
|---|---|---|
| ಒಟ್ಟು ಬೋಧಕ ಹುದ್ದೆಗಳು | 49 | 1,81,32,156.00 |
| ಒಟ್ಟು ಬೋಧಕೇತರ ಹುದ್ದೆಗಳು | 10 | 18,82,680.00 |
| | ಒಟ್ಟು | **2,00,14,836.00** |

ನಿರ್ಣಯ : **ಸದಸ್ಯರು ಈ ಸಂಬಂಧ ಚರ್ಚಿಸಿ ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಬೇಗ ತುಂಬಿಕೊಳ್ಳಲು ಸಮಗ್ರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದರು. ಪ್ರಸ್ತಾವನೆ ಸಲ್ಲಿಸುವಾಗ ಆರ್ಥಿಕ ಇಲಾಖೆಯ ಚೆಕ್–ಲಿಸ್ಟ್‌ಗೆ ಅನುಗುಣವಾಗಿ ಸಲ್ಲಿಸಲು ಸರ್ಕಾರದ ಆರ್ಥಿಕ ಇಲಾಖೆಯ ಅಧಿಕಾರಿಗಳು ಸೂಚಿಸಿದರು.**

**ವಿಷಯ 03 : ಪ್ರೊ. ಎಂ.ಕೆ. ಶ್ರೀಧರ್, ಕುಲಸಚಿವರು, ಕ.ಸಂ.ವಿ., ಇವರ ಮಾಸಿಕ ವೇತನವನ್ನು ವಿಶ್ವವಿದ್ಯಾಲಯದಿಂದ ಪಾವತಿಸುವ ಬಗೆಗೆ**

ಟಿಪ್ಪಣಿ : ಪ್ರೊ. ಎಂ.ಕೆ. ಶ್ರೀಧರ್, ಉಪಪ್ರಾಧ್ಯಾಪಕರು, ನ್ಯಾಷನಲ್ ಪದವಿ ಕಾಲೇಜು (ಸ್ವಾಯತ್ತ), ಬಸವನಗುಡಿ, ಬೆಂಗಳೂರು – 04, ಇವರು ನಿಯೋಜನೆಯ ಮೇರೆಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ 151 ಯುಆರ್‌ಸಿ 2014 ದಿನಾಂಕ 07.06.2014ರಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾಗಿ ದಿನಾಂಕ 07.06.2014ರ ಅಪರಾಹ್ನ ಅಧಿಕಾರ ವಹಿಸಿಕೊಂಡಿರುತ್ತಾರೆ. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು, ಇವರ ಸೇವಾ ಷರತ್ತು ಹಾಗೂ ನಿಬಂಧನೆಗಳ ಬಗೆಗೆ ಸರ್ಕಾರಿ ಆದೇಶಸಂಖ್ಯೆ ಇಡಿ 141 ಯುಎನ್‌ಇ 2014 ದಿನಾಂಕ 13.10.2014 ಅನ್ವಯ ಪತ್ರಿಸಿದ್ದು, ಸದರಿಯವರ ಮನವಿಯಂತೆ ನವೆಂಬರ್ ತಿಂಗಳಿನಿಂದ ಇವರ ಮಾಸಿಕ ವೇತನವನ್ನು ವಿಶ್ವವಿದ್ಯಾಲಯದಿಂದ ಪಾವತಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ : **ಸರ್ಕಾರದಿಂದ ಬಂದ ನಿಬಂಧನೆಗಳನ್ನು ಪ್ರಶಾಸನ ಸಮಿತಿಯು ಪರಿಶೀಲಿಸಿತು. ಕುಲಸಚಿವರ ಮನವಿಯಂತೆ ನವೆಂಬರ್ ತಿಂಗಳಿನಿಂದ ವೇತನವನ್ನು ಪಾವತಿಸಲು ಅನುಮೋದಿಸಲಾಯಿತು. ಪೆನ್ಷನ್ ಫಂಡ್‌ನ ಬಗೆಗೆ ಇರುವ ಸೂಚನೆಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯವು ಭರಿಸಬೇಕಾದ ಪಿಂಚಣಿ ವಂತಿಗೆಯನ್ನು ಯಾರಿಗೆ ಕಳುಹಿಸಬೇಕೆಂಬ ಮಾಹಿತಿಯನ್ನು ಸರ್ಕಾರಕ್ಕೆ ಅಥವಾ ಮಹಾಲೇಖಪಾಲರಿಗೆ ಪತ್ರ ಬರೆದು ಪಡೆಯುವಂತೆ ಸೂಚಿಸಲಾಯಿತು.**

**ವಿಷಯ 04 : ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಯ ಕರ್ತವ್ಯ, ಜವಾಬ್ದಾರಿ, ಪದೋನ್ನತಿ ಮುಂತಾದ ವಿಷಯಗಳನ್ನು ನಿರ್ಬಂಧಿಸುವ ಪರಿನಿಯಮವನ್ನು ರಚಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ಅಧಿನಿಯಮದ ಅನುಸಾರ ಯೋಜನಾ ಸಹಾಯಕ (ಶೈಕ್ಷಣಿಕ) – ಈ ಹುದ್ದೆಯನ್ನು ಸೃಜಿಸಲಾಗಿದೆ. ಆದರೆ, ಈ ಹುದ್ದೆಯ ಕರ್ತವ್ಯಗಳು, ಜವಾಬ್ದಾರಿಗಳು, ಸೇವಾ ಷರತ್ತುಗಳು, ಅರ್ಹತೆ ಮತ್ತು ಮಾನದಂಡ, ಪದೋನ್ನತಿ, ನೇಮಕಾತಿ ನಿಯಮ, ನಿಕಾಯವಾರು ವಿಂಗಡಣೆ ಮುಂತಾದ ವಿಷಯಗಳ ಬಗೆಗೆ ಯಾವುದೇ ಪರಿನಿಯಮಗಳನ್ನು ಈವರೆಗೂ ರೂಪಿಸಿರುವುದಿಲ್ಲ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮದ ಅಧ್ಯಾಯ 9 (60)ರ ಅಡಿಯಲ್ಲಿ ಸೇವಾ ಷರತ್ತುಗಳನ್ನು ಪರಿಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ, "ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಯ ಕರ್ತವ್ಯ, ಜವಾಬ್ದಾರಿ, ಪದೋನ್ನತಿ ಮುಂತಾದ ವಿಷಯಗಳನ್ನು ನಿರ್ಬಂಧಿಸುವ ಪರಿನಿಯಮ"ವನ್ನು ರಚಿಸುವ ಅವಶ್ಯಕತೆ ಇದ್ದು, ಇವುಗಳನ್ನು ರಚಿಸಿ, ಪ್ರಶಾಸನ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದು ಘನತೆವೆತ್ತ ರಾಜ್ಯಪಾಲರ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಬೇಕಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ :** **ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಯ ಕರ್ತವ್ಯ, ಜವಾಬ್ದಾರಿ, ಪದೋನ್ನತಿ ಮುಂತಾದ ವಿಷಯಗಳನ್ನು ನಿರ್ಬಂಧಿಸುವ ಪರಿನಿಯಮದ ರಚನೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಯಿತು.**

| | |
|---|---|
| **ಪ್ರೊ. ವನಿತಾ ರಾಮಸ್ವಾಮಿ**<br>ಪ್ರಶಾಸನ ಸಮಿತಿಯ ಸದಸ್ಯರು, ಕ.ಸಂ.ವಿ | ಅಧ್ಯಕ್ಷರು |
| **ಡಾ. ಟಿ.ವಿ. ಸತ್ಯನಾರಾಯಣ**<br>ನಿವೃತ್ತ ಉಪನಿರ್ದೇಶಕರು, ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು | ಸದಸ್ಯರು |
| **ಡಾ. ವಿರೂಪಾಕ್ಷ ಜಡ್ಡೀಪಾಲ್**<br>ಸಹ ಪ್ರಾಧ್ಯಾಪಕರು, ರಾ.ಸಂ.ವಿ., ತಿರುಪತಿ | ಸದಸ್ಯರು |
| **ಡಾ. ಸಿ. ಶಿವರಾಜು**<br>ಮುಖ್ಯಸ್ಥರು, ಸಂಸ್ಕೃತ ವಿಭಾಗ, ಬೆಂಗಳೂರು ವಿ.ವಿ | ಸದಸ್ಯರು |
| **ಡಾ. ವೀರನಾರಾಯಣ ಪಾಂಡುರಂಗಿ**<br>ನಿರ್ದೇಶಕರು, ಅಧ್ಯಯನಾಂಗ, ಕ.ಸಂ.ವಿ | ಸದಸ್ಯರು |
| **ವಿದ್ವಾನ್ ಉದಯನ ಹೆಗಡೆ**<br>ಯೋಜನಾ ಸಹಾಯಕರು (ಶೈಕ್ಷಣಿಕ), ಕ.ಸಂ.ವಿ | ಸಂಚಾಲಕರು |

**ವಿಷಯ 05 :** **ಸಂಸ್ಕೃತ ಸ್ನಾತಕ–ಸ್ನಾತಕೋತ್ತರ ಅಧ್ಯಯನ ಕೇಂದ್ರ (ಸಂಸ್ಕೃತ ಕಾಲೇಜು)ಗಳ ಅನುದಾನ ಸಂಹಿತೆ/ಪರಿನಿಯಮ ರಚಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದ್ದು, ಸಂಸ್ಕೃತ ಪಾಠಶಾಲೆಗಳನ್ನು ಈಗಾಗಲೇ ಪ್ರತ್ಯೇಕಗೊಳಿಸಲಾಗಿದೆ. ಈ ಪಾಠಶಾಲೆಗಳು ಅನುದಾನ ಸಂಹಿತೆ (ಗ್ರಾಂಟ್–ಇನ್–ಐಡ್–ಕೋಡ್) ಅನುಸಾರ ಕಾರ್ಯನಿರ್ವಹಿಸುತ್ತವೆ. ಈ ಪಾಠಶಾಲೆಗಳಿಂದ ಬೇರೆಯಾದ ಸಂಸ್ಕೃತ ಕಾಲೇಜುಗಳ ಮಾನ್ಯತೆ, ತಪಾಸಣೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಯು.ಜಿ.ಸಿ ನಿಯಮಗಳ ಅನುಸಾರ ಪರಿನಿಯಮವನ್ನು ರಚಿಸುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ, "ಸಂಸ್ಕೃತ ಸ್ನಾತಕ–ಸ್ನಾತಕೋತ್ತರ ಅಧ್ಯಯನ ಕೇಂದ್ರ (ಸಂಸ್ಕೃತ ಕಾಲೇಜು)ಗಳ ಅನುದಾನ ಸಂಹಿತೆ/ಪರಿನಿಯಮ"ವನ್ನು ರಚಿಸುವ ಅವಶ್ಯಕತೆ ಇದ್ದು, ಇವುಗಳನ್ನು ರಚಿಸಿ, ಪ್ರಶಾಸನ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದು ಘನತೆವೆತ್ತ ರಾಜ್ಯಪಾಲರ ಅಂಕಿತಕ್ಕಾಗಿ ಸರ್ಕಾರಕ್ಕೆ ಸಲ್ಲಿಸಬೇಕಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ :** **ಸಂಸ್ಕೃತ ಸ್ನಾತಕ–ಸ್ನಾತಕೋತ್ತರ ಅಧ್ಯಯನ ಕೇಂದ್ರ (ಸಂಸ್ಕೃತ ಕಾಲೇಜು)ಗಳ ಅನುದಾನ ಸಂಹಿತೆ/ಪರಿನಿಯಮದ ರಚನೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಯಿತು.**

| | |
|---|---|
| **ಪ್ರೊ. ಶ್ರೀನಿವಾಸ ವರಖೇಡಿ**<br>ಕುಲಪತಿಗಳು (ಪ್ರಭಾರಿ), ಕ.ಸಂ.ವಿ | ಅಧ್ಯಕ್ಷರು |
| **ವಿದ್ವಾನ್ ಶ್ರೀನಿವಾಸಮೂರ್ತಿ**<br>ಪ್ರಶಿಕ್ಷಣ ಪರಿಷತ್ ಸದಸ್ಯರು, ಕ.ಸಂ.ವಿ | ಸದಸ್ಯರು |
| **ಪ್ರೊ. ಸಿ. ನಂಜುಂಡಯ್ಯ**<br>ಅಧ್ಯಕ್ಷರು, ಪ್ರಾಚಾರ್ಯರ ಸಂಘ | ಸದಸ್ಯರು |
| **ವಿದ್ವಾನ್ ಜಿ.ಎಲ್ ಭಟ್ಟ**<br>ಪ್ರಶಿಕ್ಷಣ ಪರಿಷತ್ ಸದಸ್ಯರು, ಕ.ಸಂ.ವಿ | ಸದಸ್ಯರು |
| **ಡಾ. ವೀರನಾರಾಯಣ ಪಾಂಡುರಂಗಿ**<br>ನಿರ್ದೇಶಕರು,<br>ಅಧ್ಯಯನಾಂಗ, ಕ.ಸಂ.ವಿ | ಸದಸ್ಯರು |
| **ಪ್ರೊ. ಎಂ. ಕೆ. ಶ್ರೀಧರ್**<br>ಕುಲಸಚಿವರು, ಕ.ಸಂ.ವಿ | ಸದಸ್ಯ ಕಾರ್ಯದರ್ಶಿ |
| **ವಿದ್ವಾನ್ ಋಷಿದೇವ ಭಾರ್ಗವ**<br>ಸಹಾಯಕ ಪ್ರಾಧ್ಯಾಪಕರು, ಕ.ಸಂ.ವಿ., | ಸಂಚಾಲಕರು |

**ವಿಷಯ 06 :** **ಆಧಿನಿಯಮ ಮತ್ತು ಪರಿನಿಯಮ ಪರಿಶೀಲನ ಸಮಿತಿಯನ್ನು ರಚಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರಾರಂಭವಾದಾಗಿನಿಂದ ವಿವಿಧ ವಿಷಯಗಳ ಬಗೆಗೆ ಅನೇಕ ಪರಿನಿಯಮಗಳ ರಚನಾ ಕಾರ್ಯವನ್ನು ಪ್ರಾರಂಭಿಸಲಾಗಿತ್ತು. ಆದರೆ, ಈ ಯಾವ ಪರಿನಿಯಮಗಳೂ ಪೂರ್ಣವಾಗಿ ರಚನೆಗೊಂಡು ಪ್ರಶಾಸನ ಸಮಿತಿಯ ಅನುಮೋದನೆಯನ್ನು ಪಡೆದು ಮುಂದುವರೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ "ಪರಿನಿಯಮ ಪರಿಶೀಲನ ಸಮಿತಿ"ಯನ್ನು ರಚಿಸುವುದು ಸೂಕ್ತವಾಗಿದೆ. ಈ ಸಮಿತಿಯು ತಿಂಗಳಿಗೆ 2 ಬಾರಿ ಸಭೆ ಸೇರಿ ಆದ್ಯತೆಯ ಮೇರೆಗೆ ಪರಿನಿಯಮಗಳ ಪರಿಶೀಲನೆ ನಡೆಸಿ ಪ್ರಶಾಸನ ಸಮಿತಿಯ ಅನುಮೋದನೆ ಪಡೆದು ಘನತೆವೆತ್ತ ರಾಜ್ಯಪಾಲರ ಅಂಕಿತಕ್ಕಾಗಿ ಮಂಡಿಸಬೇಕಾಗಿದೆ. ವಿಶ್ವವಿದ್ಯಾಲಯದ ಅಧಿನಿಯಮದಲ್ಲಿ 5 ವರ್ಷಗಳ ಒಳಗಾಗಿ ತಿದ್ದುಪಡಿಯ ಅವಕಾಶವಿದೆಯೆಂದು ಉಲ್ಲೇಖಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ : **ಪರಿನಿಯಮಗಳ ರಚನೆ ಹಾಗೂ ವಿಶ್ವವಿದ್ಯಾಲಯದ ಅಧಿನಿಯಮದ ಪರಿಷ್ಕಾರಕ್ಕೆ ಸಂಬಂಧಿಸಿದಂತೆ ಪರಿನಿಯಮ ಪರಿಶೀಲನ ಸಮಿತಿಯನ್ನು ಈ ಕೆಳಕಂಡಂತೆ ರಚಿಸಲಾಯಿತು. ಈ ಸಮಿತಿಯು ಪ್ರತಿ ತಿಂಗಳು 2 ಬಾರಿ ಸಭೆ ಸೇರುವುದು. ಈ ಸಮಿತಿಯು ಮುಂದಿನ 2 ವರ್ಷಗಳ ಕಾಲ ಅಸ್ತಿತ್ವದಲ್ಲಿ ಬರುತ್ತದೆ.**

| | |
|---|---|
| **ಪ್ರೊ. ಕೆ. ಈ. ರಾಧಾಕೃಷ್ಣ**<br>ಪ್ರಶಾಸನ ಸಮಿತಿಯ ಸದಸ್ಯರು, ಕ.ಸಂ.ವಿ | ಅಧ್ಯಕ್ಷರು |
| **ಶ್ರೀ ಆರ್. ಆರ್. ಕುಲಕರ್ಣಿ**<br>ನಿವೃತ್ತ ಪ್ರಾಚಾರ್ಯರು, ಶಿವಮೊಗ್ಗ (ತಜ್ಞರು) | ಸದಸ್ಯರು |
| **ಶ್ರೀ ಬಿ.ಎಸ್. ಜಾಪಾಲಿ**<br>ನಿವೃತ್ತ ಕಾರ್ಯದರ್ಶಿಗಳು (ಉ.ಶಿ.), ಕರ್ನಾಟಕ ಸರ್ಕಾರ | ಸದಸ್ಯರು |
| **ಡಾ. ಬಿ.ಎಸ್. ಮಹದೇವಯ್ಯ**<br>ಪ್ರಶಿಕ್ಷಣ ಪರಿಷತ್ ಸದಸ್ಯರು, ಕ.ಸಂ.ವಿ | ಸದಸ್ಯರು |
| **ಪ್ರೊ. ವಿ. ಗಿರೀಶ್ ಚಂದ್ರ**<br>ಡೀನ್, ಭಾಷಾನಿಕಾಯ, ಕ.ಸಂ.ವಿ | ಸದಸ್ಯರು |
| **ಡಾ. ವೀರನಾರಾಯಣ ಪಾಂಡುರಂಗಿ**<br>ಡೀನ್, ವೇದಾಂತ ನಿಕಾಯ, ಕ.ಸಂ.ವಿ | ಸದಸ್ಯರು |
| **ಪ್ರೊ. ಎಂ. ಕೆ. ಶ್ರೀಧರ್**<br>ಕುಲಸಚಿವರು, ಕ.ಸಂ.ವಿ | ಸದಸ್ಯ ಕಾರ್ಯದರ್ಶಿ |
| **ಡಾ. ವಿನಯ್ ಪಿ.**<br>ಸಹಾಯಕ ಪ್ರಾಧ್ಯಾಪಕರು, ಕ.ಸಂ.ವಿ | ಸಂಚಾಲಕರು |

**ವಿಷಯ 07 :** **ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ – ಬೋಧಕೇತರ ಮೀಸಲು ಹುದ್ದೆಗಳನ್ನು ತುಂಬುವ ಸಂಬಂಧ ಅಧಿಸೂಚನೆಯನ್ನು ಹೊರಡಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸರ್ಕಾರದಿಂದ ಮಂಜೂರಾದ ಹುದ್ದೆಗಳಿಗೆ ಈ ಹಿಂದೆ ಪ್ರಶಾಸನ ಸಮಿತಿಯ ಅನುಮೋದನೆ ಪಡೆದು ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯನ್ನು ನಡೆಸಲಾಗಿತ್ತು. ಅವುಗಳಲ್ಲಿ ಮೀಸಲು ಹುದ್ದೆಗಳು ಈ ಹಿಂದೆ ಅರ್ಹ ಅಭ್ಯರ್ಥಿಗಳು ಸಿಗದ ಕಾರಣ ಖಾಲಿ ಉಳಿದಿದ್ದವು. ಮೀಸಲು ಹುದ್ದೆಗಳನ್ನು ಕಾಲಕಾಲಕ್ಕೆ ತುಂಬಿಕೊಳ್ಳಲು ಸರ್ಕಾರದ ಸೂಚನೆಯ ಹಿನ್ನೆಲೆಯಲ್ಲಿ ಅಧಿಸೂಚನೆಯನ್ನು ಹೊರಡಿಸಬೇಕಿದೆ. ಆದ್ದರಿಂದ, ಮತ್ತೊಮ್ಮೆ ಪ್ರಶಾಸನ ಸಮಿತಿಯ ಅನುಮೋದನೆ ಪಡೆದು ಅಧಿಸೂಚನೆಯನ್ನು ಆದಷ್ಟು ಶೀಘ್ರವೇ ಹೊರಡಿಸಲು ಸಭೆಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ : **ಈ ಬಗ್ಗೆ ಕೂಡಲೇ ಅಧಿಸೂಚನೆ ಹೊರಡಿಸಲು ಕ್ರಮವಹಿಸಲು ಸೂಚಿಸಿ ಅಂಗೀಕರಿಸಲಾಯಿತು.**

**ವಿಷಯ 08 :** **ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ನಕಲು ಪಿಎಚ್.ಡಿ ಪದವಿಗಳನ್ನು ಪಡೆದು, ನೌಕರಿ ಪಡೆದುಕೊಂಡಿರುವವರ ಮತ್ತು ಮುಂಬಡ್ತಿ ಹೊಂದಿದವರ ವಿರುದ್ಧ ಕಾನೂನಿನ ಕ್ರಮದ ಬಗೆಗೆ ಸರ್ಕಾರಕ್ಕೆ ವರದಿ ಸಲ್ಲಿಸುವ ಬಗೆಗೆ**

ಟಿಪ್ಪಣಿ : ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಮಾನ್ಯ ಕುಲಪತಿಗಳಿಗೆ ಅರೆ ಸರ್ಕಾರಿ ಪತ್ರ ಸಂಖ್ಯೆ ಇಡಿ 148 ಪ್ರ.ಕಾ 2014/134 – ಅನ್ವಯ ಪತ್ರಿಸಿ ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದರು. ಅದರಂತೆ, ಕುಲಪತಿಗಳು, ಕುಲಸಚಿವರ ಅಧ್ಯಕ್ಷತೆಯಲ್ಲಿ ಡಾ. ವನಿತಾ ರಾಮಸ್ವಾಮಿ, ಶ್ರೀ ಬಿ.ಎಸ್. ಜಾಪಾಲಿ, ಡಾ. ವೆಂಕಟೇಶಪ್ಪ, ವಿದ್ವಾನ್ ಶಿವಮೂರ್ತಿ, ಇವರನ್ನೊಳಗೊಂಡ ಸಮಿತಿಯನ್ನು ರಚಿಸಿದರು. ಸದರಿ ಸಮಿತಿಯು ವರದಿಯನ್ನು ಸಲ್ಲಿಸಿದ್ದು, ಸರ್ಕಾರಕ್ಕೆ ಸಲ್ಲಿಸುವ ಮುನ್ನ ಸಭೆಯ ಅವಗಾಹನೆಗೆ ಮಂಡಿಸಿದೆ.

ನಿರ್ಣಯ : **ಸಮಿತಿಯು ನೀಡಿದ ವರದಿಯ ಎಲ್ಲ ಅಂಶಗಳನ್ನು ದಾಖಲೆಗಳ ಸಮೇತ ಸರ್ಕಾರಕ್ಕೆ ಮತ್ತು ಉನ್ನತ ಶಿಕ್ಷಣ ಪರಿಷತ್ತಿಗೆ ಸಲ್ಲಿಸಲು ಅಂಗೀಕರಿಸಲಾಯಿತು. ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡಿರುವ ಬೋಧಕ – ಬೋಧಕೇತರ ಸಿಬ್ಬಂದಿಯ ಡಾಕ್ಟರೇಟ್ ಪದವಿಗಳು ಪ್ರಾಮಾಣಿಕವೆಂದು ದೃಢೀಕರಿಸಿರುವುದನ್ನು ಒಪ್ಪಿಕೊಳ್ಳಲಾಯಿತು. ಡಾ. ಭಾಷ್ಯಂ ಸ್ವಾಮಿಯವರ ಪಿಎಚ್.ಡಿ ವಿಷಯದಲ್ಲಿ ಬಂದ ದೂರಿನ ಸಮಗ್ರ ವಿವರ ಮತ್ತು ಸಮಿತಿಯ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ನಿರ್ಧರಿಸಲಾಯಿತು.**

**ವಿಷಯ 09 :** **ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬಡಾವಣೆ, ಬೆಂಗಳೂರು – ಈ ಸಂಸ್ಥೆಯ ಸಹಯೋಗದೊಂದಿಗೆ ತಿಂಗಳ ಉಪನ್ಯಾಸವನ್ನು ನಡೆಸುವ ಬಗೆಗೆ**

ಟಿಪ್ಪಣಿ : ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬಡಾವಣೆ, ಬೆಂಗಳೂರು – ಈ ಸಂಸ್ಥೆಯು ಕಳೆದ 40 ವರ್ಷಗಳಿಂದ ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಈ ಸ್ಥಳದಲ್ಲಿ ಸುಸಜ್ಜಿತವಾದ "ಪ್ರೊ. ಜಿ. ವೆಂಕಟಸುಬ್ಬಯ್ಯ" ಸಭಾಂಗಣವಿದೆ. ಈ ಸಂಸ್ಥೆಯ ಆಡಳಿತ ಮಂಡಳಿಯ ಪದಾಧಿಕಾರಿಗಳು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಪ್ರತಿ ತಿಂಗಳ ಕೊನೆಯ ಶನಿವಾರದ ಸಾಯಂಕಾಲದಂದು ವಿಶೇಷ ಉಪನ್ಯಾಸವನ್ನು ಒಂದು ವರ್ಷದ ಕಾಲ ಆಯೋಜಿಸಲು ಆಸಕ್ತಿ ವಹಿಸಿ ಪತ್ರಿಸಿರುತ್ತಾರೆ. ಸಭಾಂಗಣ ಹಾಗೂ ಧ್ವನಿವರ್ಧಕ ಮುಂತಾದ ವ್ಯವಸ್ಥೆಯನ್ನು ಉಚಿತವಾಗಿ ನೀಡಲು ಒಪ್ಪಿರುತ್ತಾರೆ. ಈ ಕಾರ್ಯಕ್ರಮವನ್ನು ನಡೆಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ : **ಈ ವರ್ಷದ ಆಗಸ್ಟ್ ತಿಂಗಳಿನಿಂದ ಪ್ರಾರಂಭಿಸಿ ಮುಂದಿನ ವರ್ಷದ ಸಂಸ್ಕೃತೋತ್ಸವದವರೆಗೆ ಒಂದು ವರ್ಷದ ಕಾಲ ಉಪನ್ಯಾಸ ಕಾರ್ಯಕ್ರಮವನ್ನು ಪ್ರತಿ ತಿಂಗಳು ಒಂದು ಉಪನ್ಯಾಸದಂತೆ ನಡೆಸಲು ಅಂಗೀಕರಿಸಲಾಯಿತು. ಉಪನ್ಯಾಸ ಮಾಡುವ ವಿದ್ವಾಂಸರಿಗೆ ನಿಯಮಾನುಸಾರ ಪ್ರಯಾಣಭತ್ಯೆ ಮತ್ತು ಗೌರವಧನ ಪಾವತಿಸಲು ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ 10 :** **ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಿಗಳ ಸಭೆಯ ಸದಸ್ಯರ ಪ್ರಯಾಣಭತ್ಯೆಯನ್ನು ಹೆಚ್ಚಿಸುವ ಬಗೆಗೆ**

ಟಿಪ್ಪಣಿ : ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ, ಪ್ರಶಿಕ್ಷಣ ಪರಿಷತ್ತು ಮುಂತಾದ ವಿವಿಧ ಪ್ರಾಧಿಕಾರಗಳ ಸಭೆಗೆ ಆಗಮಿಸುವ ಸದಸ್ಯರಿಗೆ ಸಭಾಭತ್ಯೆ ರೂ. 1000/– ಗಳನ್ನು ನೀಡಲಾಗುತ್ತಿತ್ತು. ಇದನ್ನು ಪ್ರಶಾಸನ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿತ್ತು. ಮಂಗಳೂರು, ಬೆಂಗಳೂರು ಹಾಗೂ ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಸಭಾಭತ್ಯೆಯನ್ನು ಹೆಚ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಭಾಭತ್ಯೆಯನ್ನು ಪರಿಷ್ಕರಿಸವ ಬಗೆಗೆ ಸದಸ್ಯರು ಪ್ರಸ್ತಾಪಿಸಿದರು.

ನಿರ್ಣಯ : **ಮಂಗಳೂರು, ಬೆಂಗಳೂರು ಹಾಗೂ ಮೈಸೂರು ವಿಶ್ವವಿದ್ಯಾಲಯಗಳ ಸಭಾಭತ್ಯೆಯನ್ನು ಪರಿಶೀಲಿಸಿ ರೂ. 1000/–ದಿಂದ ರೂ. 2000/– ವರೆಗೆ ಸಭಾಭತ್ಯೆಯನ್ನು ಹೆಚ್ಚಿಸಲಾಯಿತು. ಪ್ರಯಾಣಭತ್ಯೆಯನ್ನು ಈ ಹಿಂದಿನಂತೆ ನಿಯಮಾನುಸಾರ ನೀಡಲು ಸಭೆಯು ಒಪ್ಪಿಗೆ ಸೂಚಿಸಿತು.**

**ವಿಷಯ 11 :** **ವೇದಾಂತನಿಕಾಯದ ಯು.ಜಿ.ಸಿ ವೇತನಶ್ರೇಣಿಯ ಸಹಪ್ರಾಧ್ಯಾಪಕ ಹುದ್ದೆಗೆ ಶಿಫಾರಸ್ಸುಗೊಂಡಿದ್ದ ಅಭ್ಯರ್ಥಿ ಡಾ. ಕೆ. ಎಸ್. ಸುಮನ್ ಇವರ ನೇಮಕಾತಿಗೆ ಸಂಬಂಧಿಸಿದಂತೆ ಇರುವ ತಾಂತ್ರಿಕ ಸಮಸ್ಯೆಗೆ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯದ ಬಗೆಗೆ**

ಟಿಪ್ಪಣಿ : ದಿನಾಂಕ 03.03.2014ರಂದು ನಡೆದ ಪ್ರಶಾಸನ ಸಮಿತಿಯ 20ನೇ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಲಾಗಿತ್ತು. ಸಹ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳಲ್ಲಿ ವೇದಾಂತ ನಿಕಾಯಕ್ಕೆ ಡಾ. ವೀರನಾರಾಯಣ ಪಾಂಡುರಂಗಿ ಹಾಗೂ ಶಾಸ್ತ್ರನಿಕಾಯಕ್ಕೆ ಡಾ. ಬಿ.ವಿ. ವೆಂಕಟರಮಣ ಅವರನ್ನು ನೇಮಕ ಮಾಡಿ ಅನುಮೋದಿಸಲಾಗಿತ್ತು. ಆದರೆ, ವೇದಾಂತ ನಿಕಾಯಕ್ಕೆ ಆಯ್ಕೆ ಸಮಿತಿಯಿಂದ ಶಿಫಾರಸ್ಸುಗೊಂಡಿದ್ದ ಅಭ್ಯರ್ಥಿ ಡಾ. ಕೆ.ಎಸ್. ಸುಮನ್ ಅವರಿಗೆ ಸಂಬಂಧಿಸಿದಂತೆ ಶೈಕ್ಷಣಿಕ ವಿಷಯದಲ್ಲಿ ತಾಂತ್ರಿಕ ಸಮಸ್ಯೆಗಳು ಇರುವುದರಿಂದ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆದು ಮುಂದಿನ ಪ್ರಶಾಸನ ಸಮಿತಿಯ ಸಭೆಯಲ್ಲಿ ಮಂಡಿಸಲು ಸೂಚಿಸಿತು. ಅದಕ್ಕನುಗುಣವಾಗಿ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಿಗೆ ಅಭ್ಯರ್ಥಿಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನು ದಾಖಲೆಗಳ ಸಮೇತ ನೀಡಲಾಗಿತ್ತು. ಅದಕ್ಕನುಗುಣವಾಗಿ ಹಿರಿಯ ನ್ಯಾಯವಾದಿಗಳಾದ ಶ್ರೀ ಸುಬ್ರಹ್ಮಣ್ಯ ಜೋಯಿಸ್ ಇವರ ಅಭಿಪ್ರಾಯ ಪಡೆದು ಕಾನೂನು ಸಲಹೆಗಾರರಾದ ಶ್ರೀ ಶಾಂತಕುಮಾರ್, ಇವರು ದಿನಾಂಕ 08.07.2014ರಂದು ಮುಚ್ಚಿದ ಗೌಪ್ಯ ಲಕೋಟೆಯಲ್ಲಿ ಅಭಿಪ್ರಾಯವನ್ನು ನೀಡಿದ್ದರು. ಈ ಲಕೋಟೆಯನ್ನು ಒಡೆಯಬೇಕೇ ಬೇಡವೇ ? ಎಂಬುದರ ಬಗ್ಗೆ ಸದಸ್ಯರ ಅಭಿಪ್ರಾಯ ಕೇಳಲಾಯಿತು. ಲಕೋಟೆಯನ್ನು ಒಡೆದು ವಿಷಯನ್ನು ಮಂಡಿಸಿದ ನಂತರ ಮುಂದಿನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಾಗಿ ಸದಸ್ಯರು ತಿಳಿಸಿದರು. ಅದರಂತೆ, ಕುಲಸಚಿವರು ಲಕೋಟೆಯನ್ನು ಒಡೆದು ಪತ್ರವನ್ನು ಯಥಾವತ್ತಾಗಿ ಓದಿದರು.

ನಿರ್ಣಯ : **ಕುಲಸಚಿವರು ಮಂಡಿಸಿದ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯಗಳನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಈ ಕೆಳಕಂಡ ಅಂಶಗಳಲ್ಲಿ ಕಾನೂನು ಸಲಹೆಗಾರರು ಈ ನೇಮಕಾತಿಯ ಬಗೆಗೆ ಗಂಭೀರವಾದ ಕೆಲವು ಪ್ರಶ್ನೆಗಳನ್ನು ಮುಂದಿಟ್ಟಿರುತ್ತಾರೆ.**

1. **ವೇದಾಂತ ನಿಕಾಯದ ಸಹಪ್ರಾಧ್ಯಾಪಕ ಹುದ್ದೆಗೆ ಡಾ. ಕೆ. ಎಸ್. ಸುಮನ್ ಅವರು ಯು.ಜಿ.ಸಿ ನಿಯಮಾನುಸಾರ ಅರ್ಹವಾದ ಸೇವಾನುಭವವನ್ನು ಹೊಂದಿರುತ್ತಾರೆಯೇ ಎಂಬ ಪ್ರಶ್ನೆ ಎತ್ತಿಕೊಂಡು, ಇದು ಯು.ಜಿ.ಸಿ ನಿಯಮಾನುಸಾರ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ನಿರ್ಧರಿಸಬೇಕಾಗಿರುವುದರಿಂದ ಹಾಗೆ ಮಾಡದೆಯೇ ಈ ನೇಮಕಾತಿಯನ್ನು ಮಾಡುವುದು ಸಾಧುವಲ್ಲ.**
2. **ಪ್ರಾಥಮಿಕ ತನಿಖೆಯಿಂದ ವೇದಾಂತವಿಭಾಗದ ಬೋಧಕ ಹುದ್ದೆಗೆ ಸಾಮಾನ್ಯ ಸಂಸ್ಕೃತದಲ್ಲಿ ಬೋಧಿಸಿದ ಅನುಭವವನ್ನು ಪರಿಗಣಿಸುವುದರ ಬಗೆಗೆ ಅನೇಕ ಸಮಸ್ಯೆಗಳು ಇರುವುದರಿಂದ ಈ ವಿಷಯದಲ್ಲಿ ಈ ಅಭ್ಯರ್ಥಿಗೆ ಅರ್ಹತೆಯ ಕೊರತೆ ಕಾಣುತ್ತಿದೆ. ಹಾಗೆಯೇ, ಸದರಿಯವರ ಪಿಎಚ್.ಡಿ ಸಂಶೋಧನೆಯ ಕಾಲವನ್ನು ಹೊರತುಪಡಿಸಿ 5 ವರ್ಷಗಳ ವೇದಾಂತ ವಿಷಯದಲ್ಲಿ ಬೋಧನಾನುಭವವನ್ನು ಪರಿಗಣಿಸಬೇಕಾಗಿರುವುದರಿಂದ ಅಲ್ಲಿಯೂ ಸೇವಾನುಭವದ ಕೊರತೆ ಕಂಡುಬರುತ್ತದೆ.**
3. **ಹಾಗೆಯೇ, ಸಂವಿಧಾನದ 14(6) ಪರಿಚ್ಛೇದಕ್ಕೆ ಅನುಗುಣವಾಗಿ ಸಾಮಾನ್ಯ ವರ್ಗಕ್ಕೆ ಸೇರಿದ ಅಭ್ಯರ್ಥಿಯನ್ನು ಆ ವಿಭಾಗದ ಮೀಸಲಾತಿ ಹುದ್ದೆಗೆ ತುಂಬುವುದು ಪ್ರಶ್ನಾರ್ಹವಾದ ವಿಷಯವಾದುದರಿಂದ ಈ ಬಗ್ಗೆ ಹೆಚ್ಚಿನ ಅಧ್ಯಯನದ ಅವಶ್ಯಕತೆ ಇದೆ.**
4. **ಅಷ್ಟೇ ಅಲ್ಲದೇ, ಸದರಿ ಅಭ್ಯರ್ಥಿಯು ಎನ್.ಐ.ವಿ.ಎಸ್ ಎಂಬ ವಿಶ್ವವಿದ್ಯಾಲಯವಲ್ಲದ ಖಾಸಗಿ ಸಂಸ್ಥೆಯು ನೀಡಿದ ಪ್ರಮಾಣಪತ್ರದ ಆಧಾರದಲ್ಲಿ ಇವರಿಗೆ ಸ್ನಾತಕೋತ್ತರ ಬೋಧನಾನುಭವ (post-graduate teaching experience) ಮತ್ತು ಪಿಎಚ್.ಡಿ ಮಾರ್ಗದರ್ಶನದ ಅರ್ಹತೆ, ಇವುಗಳನ್ನು ಪರಿಗಣಿಸಬಹುದೇ ಎಂಬುದು ಪ್ರಶ್ನಾರ್ಹವಾಗಿದೆ.**

**ಈ ಎಲ್ಲ ಪ್ರಶ್ನೆಗಳಿರುವಾಗ ಈ ಬಗೆಯ ಸಂದೇಹಗಳಿರುವಾಗ ಸರಿಯಾದ ಅಧ್ಯಯನವನ್ನು ಮಾಡಿ ಒಂದು ಖಚಿತವಾದ ನಿರ್ಣಯಕ್ಕೆ ಬರುವುದು ಉಚಿತವಾಗಿರುವುದರಿಂದ, ತಾತ್ಕಾಲಿಕವಾಗಿ ಈ ನೇಮಕಾತಿಯ ಬಗೆಗೆ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವುದು ಅನುಚಿತವಾಗುತ್ತದೆಂದೂ ಮತ್ತು ನೇಮಕಾತಿಯು ಅಸಿಂಧುವಾಗುತ್ತದೆಯೆಂದೂ ಕಾನೂನು ಸಲಹೆಗಾರರು ಅಭಿಪ್ರಾಯಪಟ್ಟಿರುತ್ತಾರೆ.**

ಈ ಅಭಿಪ್ರಾಯದ ಹಿನ್ನೆಲೆಯಲ್ಲಿ ಪ್ರಶಾಸನ ಸಮಿತಿಯ ಸದಸ್ಯರು ಸದರಿ ಪ್ರಕರಣದಲ್ಲಿ ನೇಮಕಾತಿಯ ನಿರ್ಧಾರವನ್ನು ಮಾಡುವುದು ಉಚಿತವಲ್ಲವೆಂದು ಅಭಿಪ್ರಾಯಪಟ್ಟರು. ಹಾಗಿದ್ದರೂ, ಮೇಲ್ಕಂಡ ಪ್ರಶ್ನೆಗಳ ವಿಷಯದಲ್ಲಿ ಸೂಕ್ತವಾದ ನಿರ್ಧಾರಗಳನ್ನು ಕೈಗೊಳ್ಳಲು ವಿಶ್ವವಿದ್ಯಾಲಯ ಅನುದಾನ ಆಯೋಗ (ಯು.ಜಿ.ಸಿ), ಮತ್ತು ಏ.ಐ.ಯು (ಅಸೋಸಿಯೇಷನ್ ಆಫ್ ಇಂಡಿಯನ್ ಯುನಿವರ್ಸಿಟೀಸ್) ಮತ್ತ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತುಗಳಿಗೆ ಪತ್ರ ಬರೆದು ಸೂಕ್ತ ಮಾರ್ಗದರ್ಶನವನ್ನು ಕೋರುವುದು ಉಚಿತವೆಂದು ಸಭೆಯು ತೀರ್ಮಾನಿಸಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

Sridhar M.K.
ಪ್ರೊ. ಎಂ.ಕೆ. ಶ್ರೀಧರ್
ಸದಸ್ಯ ಕಾರ್ಯದರ್ಶಿ

Srivara
ಪ್ರೊ. ಶ್ರೀನಿವಾಸ ವರಖೇಡಿ
ಅಧ್ಯಕ್ಷರು